# HAVYAKA SANDESHA

# ಹವ್ಯಕ ಸಂದೇಶ

A Monthly Newsletter of Havyaka Welfare Trust, Estd. 1964

॥धर्मो रक्षति रक्षितः॥

Vol. 32 No. 10 AUGUST 2023 Pages 16 Rs. 2/-




**FORTHCOMING EVENT : ANNUAL GENERAL BODY MEETING & CULTURAL PROGRAMME ON 27TH AUGUST, 2023, 9-30AM ONWARDS AT HAVYAKARA SABHAGRAHA, DIPTI SOLITAIRE, GHATKOPAR (W), MUMBAI.**


*PAGE DONATED BY : PROFESSIONAL COURIERS WESTERN & CENTRAL REGION, COURTESY : SHRI RAMESH G. HEGDE, MADAPPAN, KARKI, DADAR T. T.*

"Havyaka Sandesha" is a monthly publication by
**HAVYAKA WELFARE TRUST, Mumbai**
B-207, Valmiki Apartment, Sundar Nagar, Kalina,
Vidyanagari P. O. Mumbai - 400 098 ✆ 2665 2591

| | | |
|---|---|---|
| **Hon. Editor** | : | Smt. Amita S. Bhagwat |
| **Editorial Committee** | | Smt. Shashikala Hegde<br>Smt. Tanuja Hegde<br>Shri Umesh Hegde<br>Shri Ganesh Bhat<br>Smt. Shailaja Hegde |
| **Publisher** | : | Narayan Akadas R.<br>Hon. Gen. Secretary |
| **Printed at** | : | M/s. Navin Printers<br>Mumbai - 400 016.<br>✆ 2430 8316 |


**Havyaka Welfare Trust (Estd. 1964)** : is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :**
Patron (PT) Rs. 5010/-, Benefactor (BN)Rs.3010/-, Sustaining Life Member (SL) Rs. 2010/-, Life Member (LM) Rs. 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted.Cheque & DD shall be drawn in favour of "Havyaka Welfare Trust".

**Havyaka Sandesha Advertisement Tariff :**
¼ Page B/W Rs. 5000/- annum Rs. 500/- one time.
¼ Page Colour 15,000/- annum Rs. 1500/- one time.
½ Page B/W Rs. 10,000/- annum Rs. 1,000/- one time
½ Page Colour Rs. 30,000/- per annum & 3,000/-one time.
Full Page B/W Rs.15,000/- annum Rs. 2,000/- one time
Full Page Colour Rs. 45,000/- annum & Rs. 5,000/- one time.
Matrimonial Rs. 500/- per Issue
Page Sponsorship Rs. 5000/- per annum

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2022-2023**

| | | |
|---|---|---|
| **President** | : | Shivkumar P. Bhagwat |
| **Vice - President** | : | Sanjay Bhat |
| **Hon. Gen. Secretary** | : | Narayan Akadas |
| **Hon. Jt. Secretary** | : | Vasant Bhat |
| **Hon. Treasurer** | : | Gautam Upadhya |

***Elected Members :***

| | |
|---|---|
| Smt. Tanuja Hegde | G. S. Bhat |
| Smt. Shashikala Hegde | Vishnu Bhagwat |
| Ramana Bhat | Ramesh Vaidya |
| Umesh Hegde | Chidanand Bhagwat |
| Anant Bhat | |

***Co-opted Members :***
Chandrashekhar Joshi, G. V. Hegde

*ಸಂಪಾದಕೀಯ*

# ಸದ್ದಿಲ್ಲದೆ ಸರಿಯುವ ಸಮಯ



ಜುಲೈ ಹದಿನಾಲ್ಕು, 2023 ಭಾರತದ ಬಾಹ್ಯಾಕಾಶ ಕ್ಷೇತ್ರದ ಅವಿಸ್ಮರಣೀಯ ದಿನ. ಚಂದ್ರಯಾನ-3ರ ಉಡಾವಣೆಗೆ ಕ್ಷಣಗಣನೆ ಆರಂಭವಾದೊಡನೆ ಎಲ್ಲರಲ್ಲೂ ತುಸು ಆತಂಕ, ಕುತೂಹಲ. ಉಡ್ಡಯನ ಯಶಸ್ವಿ ಎಂಬ ಘೋಷಣೆಯೊಂದಿಗೆ ರೋಮಾಂಚನ, ಪುಳಕ ಜೊತೆಗೆ ಹರ್ಷೋದ್ಗಾರ. ಭಾರತೀಯ ಬಾಹ್ಯಾಕಾಶ ವಿಜ್ಞಾನಿಗಳ ಶ್ರಮ ಮೊದಲ ಹಂತದಲ್ಲಿ ಸಫಲತೆಯನ್ನು ಪಡೆದ ಧನ್ಯತೆ. ಸಮಯದೊಂದಿಗೆ ಸ್ನೇಹವನ್ನು ಬೆಳೆಸಿಕೊಳ್ಳುತ್ತಾ ಮಾನವ ಇಂದು ಆಧುನಿಕ ತಂತ್ರಜ್ಞಾನದಲ್ಲಿ ಅನೇಕ ಸಾಧನೆಗಳನ್ನು ಮಾಡಿದ್ದಾನೆ. ಚಂದಮಾಮಾನನ್ನು ತೋರಿಸುತ್ತ ಮಕ್ಕಳಿಗೆ ಅಮ್ಮಂದಿರು ತುತ್ತು ತಿನ್ನಿಸುವ ಕಾಲವೊಂದಿತ್ತು ಎನ್ನುವುದೇ ಸುಳ್ಳೆನಿಸುವಂತೆ ಮುಂದೊಂದು ದಿನ ಮಕ್ಕಳನ್ನು ಚಂದ್ರಮನ ಮೇಲೆ ವಿಹಾರಕ್ಕೆಂದು ಕರೆದೊಯ್ಯುವ ಸಮಯವೂ ಬರಬಹುದೆನಿಸುತ್ತದೆ. ದೂರದ ಪೇಟೆ, ಪಟ್ಟಣವಾಸಿಗಳಾದ ನಾವು, ನಮ್ಮ ಹುಟ್ಟೂರನ್ನು ಸೇರಲು ದಿನಗಟ್ಟಲೆ ಪಯಣಿಸುತ್ತಿದ್ದ ಸಮಯ ಬದಲಾಗಿ ಇಂದು ಪ್ರಪಂಚದ ಒಂದು ಮೂಲೆಯಿಂದ ಇನ್ನೊಂದು ಮೂಲೆಯನ್ನು ಅತಿ ಶೀಘ್ರವಾಗಿ, ಸುಲಭವಾಗಿ ತಲುಪಬಹುದಾಗಿದೆ. ತುರ್ತು ಸಂದೇಶಗಳ ರವಾನೆಗಾಗಿ ವಾರಗಟ್ಟಲೇ ಪರದಾಡಬೇಕಾದ ದಿನಗಳು ಕಳೆದು ಈಗ ಕ್ಷಣಾರ್ಧದಲ್ಲಿ ಸಾವಿರಾರು ಜನರೊಂದಿಗೆ ಸಂಪರ್ಕವನ್ನು ಸಾಧಿಸಬಲ್ಲ ಸಾಧನವನ್ನು ಅಂಗೈಯಲ್ಲಿಟ್ಟುಕೊಂಡು ಓಡಾಡುತ್ತೇವೆ.

ಸಮಯವೆಂದರೆ ಹಾಗೇ, ಎಲ್ಲ ಕಾಲದಲ್ಲಿಯೂ ಒಂದೇ ರೀತಿಯಾಗಿರದು, ಬದಲಾವಣೆ ಹೊಂದುತ್ತಾ ಮುನ್ನಡೆಯುವುದೇ ಅದರ ಜಾಯಮಾನ. ಭದ್ರವಾಗಿ ತಮ್ಮ ಮುಷ್ಟಿಯಲ್ಲಿ ಹಿಡಿದಿಟ್ಟುಕೊಳ್ಳುತ್ತೇವೆ ಎಂದು ಅಹಂಕಾರದಿಂದ ಬೀಗುವವರ ಬೆರಳ ಸಂದಿಯಿಂದ ಮರಳಕಣಗಳಂತೆ ಸೋರಿಬಿಡುವುದು; ಹಣದ ಮದದಿಂದ ಖರೀದಿಸಿಯೇ ಬಿಡುವೆವು ಎಂದು ಗರ್ವ ಪಡುವವರ ತಿಜೋರಿಯಲ್ಲಿ ಬಂಧಿಯಾಗದೇ ಸ್ವತಂತ್ರವಾಗಿ ಮುನ್ನಡೆಯುವುದು ಸಮಯ. ತನ್ನ ವೇಗಕ್ಕೆ ಸಮನಾಗಿ ಜನರು ಹೆಜ್ಜೆ ಹಾಕಿದರೂ ಸರಿ, ಸೋಮಾರಿಗಳಂತೆ ಹಿಂದೆ ಉಳಿದರೂ ಸರಿ, ಯಾರ ದಾರಿಯನ್ನೂ ಕಾಯದೆ ತನ್ನಷ್ಟಕ್ಕೆ ತಾನು ಸದ್ದಿಲ್ಲದೆ ಸರಿಯುವುದು ಅದರ ಸ್ವಭಾವ.

'ಋಷಿವಾಕ್ಯದೊಡನೆ ವಿಜ್ಞಾನಕಲೆ ಮೇಳವಿಸೆ ಜಸತು ಜನಜೀವನಕೆ' ಎನ್ನುವ ಕಗ್ಗದ ಸಾಲುಗಳು ಹೇಳುವಂತೆ, ಹೊಸ ಹೊಸ ಸಾಧನ, ಸಲಕರಣೆಗಳ ಆವಿಷ್ಕಾರ, ಬಳಕೆಯೊಂದಿಗೆ ಗಗನಕುಸುಮವೆನಿಸುವ ಚಂದ್ರತಾರೆಯರನ್ನು ಕೈಗೆಟಕಿಸಿಕೊಳ್ಳುವ ಭರದಲ್ಲಿ ನಮ್ಮ ಪಾರಂಪರಿಕ, ಸಾಂಪ್ರದಾಯಿಕ, ಕೌಟುಂಬಿಕ ಪದ್ಧತಿಗಳನ್ನು ಬಿಡದೆ ಅನುಸರಿಸುವ ಸೌಹಾರ್ದ ಮನೋಭಾವ ನಮ್ಮಲ್ಲಿ ನಿರಂತರವಾಗಿ ಹರಿಯುತ್ತಿರಲಿ. ಗಟ್ಟಿಯಾದ ಹಳೆಯ ಬೇರುಗಳೊಂದಿಗೆ ಹೊಸ ಚಿಗುರು ಸದಾ ನಳನಳಿಸುತ್ತಿರಲಿ.

**ಎಲ್ಲರಿಗೂ ಸ್ವಾತಂತ್ರ್ಯೋತ್ಸವದ ಶುಭಾಶಯಗಳು**

**- ಶಶಿಕಲಾ ಹೆಗಡೆ**

# From The President's Desk

Dear Friends,



This month of Shravan (though Adhika Shravana) is brushed with hush green, peeping from concrete jungle. We are happy when it showers, but when the rain lashes heavily, we are concerned about the safety of the people. The news of flood brings distress. Roads full of potholes, traffic jam, the fear of being stuck in the waterlogged area bother us. We are concerned about the safety of our members. We request you all to take utmost care.

We are happy that we will again be meeting, after summer vacation, in the Annual General Body meeting which will be held on 27th August, 2023 at our Havyakara Sabhagraha. We have also planned variety entertainment program on that day so that our members and their family can showcase their talent. We request our members to attend the program and enjoy the event.

We are happy to note that our active member Smt. Kala Chidanand Bhagwat has received 'Shodha Siri' Prashasti from Kannada Department of Mumbai University. We congratulate her.

We are happy to inform you that we have entrusted our Sabhagraha to Dipti Caterers, Ghatkopar on Leave & Licence. That is being renovated by them. We can again have some programs over there.

We are also happy to inform that Shubham Karoti has agreed to continue using the Dhyan Mandir, Dombivli for a year.

We have been discussing with doctors as well as Medical Service Providers for utilizing of the Medical Centre, Dombivli and we hope it may materialize.

Wishing you all Happy Independence Day. Vande Mataram.

With Regards,

**S. P. BHAGWAT**
**President**

## HAVYAKA WELFARE TRUST BANK A/C DETAILS

Due to the merger of Corporation Bank with the Union Bank of India we request the members to note the change in the bank details

**Union Bank of India, Santacruz (E), Mumbai Branch, Mumbai 400 029**

1) **Havyaka Welfare Trust**
   **S.B. A/c No. 520101249405926**
   **IFS Code : UBINO904996**

2) **Havyaka Welfare Trust Women Welfare Cell**
   **S.B. A/c No. 520101249405962**
   **IFS CODE : UBINO904996**

**Donations to 'Havyaka Welfare Trust' qualify for tax deduction under section 80 (G).**

*PAGE DONATED BY :* ***HEGDE HOSPITAL, CHEMBUR,*** *COURTESY :* ***DR. DINESH HEGDE***

# ಮಾಸ ಮಹಾತ್ಮ್ಯೆ

✍ ಗಣಪತಿ ಭಡ್ತಿ

*(ಕಳೆದ ಸಂಚಿಕೆಯಿಂದ)*

ಭಾದ್ರಪದ ಶುದ್ಧ 4 ನೆಯ ದಿನ ಶ್ರೀವಿನಾಯಕನ ಮೃಣ್ಮಯ ಪ್ರತಿಮೆಯನ್ನು ಪೂಜಿಸಿ ಅದೇ ದಿನ ಅಥವಾ ನಾಲ್ಕು, ಏಳು, ಹತ್ತು ಇತ್ಯಾದಿ ತಮ್ಮ ತಮ್ಮ ಕುಲಾಚಾರವಿದ್ದಷ್ಟು ದಿನಗಳ ನಂತರ ವಿಸರ್ಜನೆ ಮಾಡುವ ರೂಢಿಯಿರುತ್ತದೆ. ವಿಸರ್ಜನದವರೆಗೂ ಉತ್ಸವ ನಡೆಸುವರು. ವಿಸರ್ಜನಾ ನಂತರ ಆ ಪ್ರತಿಮೆಯನ್ನು ನೀರಲ್ಲಿ ಬಿಡಬೇಕೆಂದು ಶಾಸ್ತ್ರವಿಧಿಯಿರುತ್ತದೆ. ಮುಂಬಯಿ ಇಲಾಖೆಯ ಕೆಲವು ಭಾಗಗಳಲ್ಲಿ ಕಾಗದದ ಮೇಲೆ ಗಣಪತಿಯ ಚಿತ್ರ ಬರೆದು ಪೂಜಿಸುವ ರೂಢಿಯಿರುತ್ತದೆ. ಮುಸಲ್ಮಾನರ ಬಾಧೆಯಿಂದ ದೇಶತ್ಯಾಗ ಮಾಡಿದಾಗ ಅಡವಿ-ಗುಡ್ಡಗಳಲ್ಲಿ ವಾಸಮಾಡುವ ಪ್ರಸಂಗ ಬಂದದ್ದರಿಂದ ಆ ಕಾಲಕ್ಕೆ ತಮ್ಮ ಧಾರ್ಮಿಕ ವಿಧಿಯನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಈ ರೂಢಿಯುಂಟಾಗಿರಬಹುದೆಂದು ತೋರುತ್ತದೆ. ತೃತೀಯೆಯ ದಿನ ಶ್ರೀಶಂಕರ ಗೌರಿಗಳ ಚಿತ್ರವನ್ನು ಪೂಜಿಸುವ ಸಾಂಪ್ರದಾಯವಿರುತ್ತದೆ. ಕೊಂಕಣ ಹಾಗೂ ಮಹಾರಾಷ್ಟ್ರ, ಮುಂಬಯಿ ಈ ಕೆಲವು ಪ್ರದೇಶಗಳಲ್ಲಿ ಸಪ್ತಮಿಯಿಂದ ನವಮಿವರೆಗೆ ಜ್ಯೇಷ್ಠಾಗೌರಿಯ ಪೂಜೆ ಮಾಡುವರು. ಹಾಗೂ ಗೌರಿಯ ಪೂಜೆಯನ್ನು ತೃತೀಯೆಯ ದಿನ ಮಾಡಿ ಈ ಗೌರಿ ಹಾಗೂ ಗಣಪತಿಗಳ ವಿಸರ್ಜನವನ್ನು ಒಂದೇ ದಿನ ಮಾಡುವುದೂ ಉಂಟು. ಬ್ರಾಹ್ಮಣರಿಂದ ಶೂದ್ರರವರೆಗೆ ಎಲ್ಲ ವರ್ಣದವರೂ ಎಲ್ಲ ಹಿಂದೂ ಪಂಥದವರೂ, ಈ ದೇವತೆಯನ್ನು ಬಹು ಭಕ್ತಿಯಿಂದ ಆರಾಧಿಸುವರು. ಬಂಗಾಲ ಪ್ರಾಂತದಲ್ಲಿ ಈ ಗಣೇಶೋತ್ಸವ ವಿಲ್ಲ. ದಕ್ಷಿಣ ಹಿಂದುಸ್ಥಾನದಲ್ಲಿ ಈ ಉತ್ಸವವು ನಡೆಯುತ್ತದೆ. ತೆಲುಗು ಜನರು 'ಪಿಲ್ಲೆಯರ ಚವತಿ' ಎಂದು ಹೇಳುವರು. ಎಲ್ಲ ಸಂಸ್ಥಾನಿಕರೂ ಮಠಾಧೀಶರೂ ಈ ಉತ್ಸವವನ್ನು ಬಹಳ ವೈಭವದಿಂದ ಮಾಡುವರು. ಇತ್ತಲಾಗಿ ಸಾರ್ವಜನಿಕ ಗಣಪತ್ಯುತ್ಸವದ ಪ್ರಚಾರವಾಗಹತ್ತಿದೆ. ಈ ಗಣಪತಿಯ ಮುಂದೆ ಪುರಾಣ, ಕಥಾ, ವ್ಯಾಖ್ಯಾನಾದಿಗಳು ನಡೆಯುತ್ತವೆ. ಈ ಚತುರ್ಥಿಯ ಉತ್ಸವವು ಹಿಂದುಸ್ಥಾನದ ಎಲ್ಲ ಭಾಗಗಳಲ್ಲಿ ನಡೆಯುತ್ತಿರದಿದ್ದರೂ ಶ್ರೀಗಣಪತಿಯ ಬಗ್ಗೆ ಸಂಪೂರ್ಣ ಪೂಜ್ಯಭಾವವು ಹಿಂದುವೆನಿಸುವ ಪ್ರತಿಯೊಬ್ಬನಲ್ಲಿರುತ್ತದೆ. ಈ ದೈವತವು ವಿಘ್ನಪರಿಹಾರಕ ವೆಂದು ಪ್ರಸಿದ್ಧವಿರುವುದರಿಂದ ಸರ್ವ ಶುಭಾಶುಭ ಕರ್ಮಗಳಲ್ಲಿ ಪ್ರಾರಂಭಕ್ಕೆ ಗಣಪತಿ ಪೂಜನವು ನಡೆಯುತ್ತದೆ. ನಿತ್ಯಪೂಜೆಯ ಪಂಚಾಯತನದಲ್ಲೂ ಶ್ರೀಗಣಪತಿಯ ಸಮಾವೇಶವಾಗಿದೆ. ಆ ಸೇತುಹಿಮಾಚಲ ಹಳ್ಳಿಹಳ್ಳಿಗಳಲ್ಲಿ ಶ್ರೀಗಣನಾಯಕನ ದೇವಾಲಯವಿದ್ದದ್ದು ಕಂಡು ಬರುತ್ತದೆ. ಕೆಲವರು ಶ್ರೀಗಣಪತಿಯನ್ನು ಕುಲದೈವತವೆಂದೂ ಆರಾಧಿಸುತ್ತಾರೆ.

ಗಣೇಶನು ಸತ್ವ - ರಜ - ತಮಗಳೆಂಬ ತ್ರಿಗುಣೇಶನಾಗಿದ್ದಾನೆಂದೂ, ಸೃಷ್ಟಿಯನ್ನು ವ್ಯಾಪಿಸಿರುವ ಪರಮೇಶ್ವರನು ('ಓಂ') ಪ್ರಣವವಾಚ್ಯನಾಗಿದ್ದು ಶ್ರೀಗಣೇಶನೇ ಅವನ ಸ್ವರೂಪನಿರುವನೆಂದೂ, ಗಣೇಶಪುರಾಣದಲ್ಲಿ ಹೇಳಿದೆ. ವಕ್ರತುಂಡ, ಏಕದಂತ ಎಂಬವು ಪ್ರಣವದ ಬಾಹ್ಯರೂಪದಿಂದ ಬಂದ ಹೆಸರುಗಳಾಗಿರುತ್ತವೆಂದು ವರ್ಣನೆಯಿದೆ. ಚತುರ್ಥಾವಸ್ಥೆ ಅಂದರೆ ತುರೀಯಾವಸ್ಥೆಯಲ್ಲಿ ಪರಮಾತ್ಮನ ಸಾಕ್ಷಾತ್ಕಾರವಾಗುವುದರಿಂದ ಚತುರ್ಥೀ ತಿಥಿಯು ಪೂಜ್ಯವಾಗಿದೆಂದು ಅವರ ಮತ. ಚಂದ್ರನು ಮನಸ್ಸಿನ ದೇವತೆಯಾಗಿದ್ದು ಈ ಚಂಚಲವಾದ ಮನಸ್ಸಿನ ಲಯವೆಂಬದೇ ಚಂದ್ರದರ್ಶನವನ್ನು ಮಾಡದಿರೋಣವು. ಕಾಲವು ಸೃಷ್ಟಪದಾರ್ಥಗಳನ್ನು ಕ್ಷಣಶಃ ನಾಶ ಮಾಡುತ್ತಿರುತ್ತದೆ. ಇದರಂತೆ ಇಲಿಯಾದರೂ ಪದಾರ್ಥಗಳನ್ನು ನಾಶಮಾಡುವುದಾದ್ದರಿಂದ ಅದು ಕಾಲಸ್ವರೂಪಿಯು. ಕಾರಣ ಕಾಲವನ್ನು ವಶದಲ್ಲಿಟ್ಟುಕೊಂಡವನೆಂಬದನ್ನು ತೋರಿಸುವದಕ್ಕಾಗಿಯೇ ಮೂಷಕವಾಹನ ನೆನಿಸಿಕೊಂಡನು. ಇತ್ಯಾದಿ ಈ ದೈವತದ ಬಗ್ಗೆ ತಾತ್ವಿಕ ಅರ್ಥ ಮಾಡಲ್ಪಟ್ಟಿದೆ.



ಶ್ರೀ ಗಣಪತ್ಯುಪಾಸಕರಿಗೆ ಗಾಣಪತ್ಯರೆನ್ನುವರು. ಈ ಪಂಥದಲ್ಲಿ ಆರು ಭೇದಗಳಿರುತ್ತವೆಂದು ಶಂಕರದಿಗ್ವಿಜಯದಲ್ಲಿ ಹೇಳಿದೆ. 1. ಮಹಾ ಗಣಪತಿಪಂಥದವರು-ಶ್ರೀ ಗಣಪತಿಯೇ ಜಗತ್ಕರ್ತನೆಂದೂ, ಬ್ರಹ್ಮಾದಿ ದೇವತೆಗಳಿಗೂ ಆದಿಪುರುಷನೆಂದೂ ತಿಳಿಯುತ್ತಾರೆ; 2. ಹರಿದ್ರಾ ಗಣಪತಿ ಪಂಥದವರು - ಶ್ರೀಗಣಸೂಕ್ತದೊಳಗಿನ ಬ್ರಹ್ಮಣಸ್ಪತಿಯೇ ಗಣಪತಿ ಯೆಂದೂ, ಆ ಮೂರ್ತಿಯೂ, ಅವನ ಯಜ್ಞೋಪವೀತ ವಸ್ತ್ರಾದಿಗಳೂ, ಹಳದಿ ಬಣ್ಣದವೆಂದೂ, ತಿಳಿಯುತ್ತಾರೆ. ವಕ್ರತುಂಡ, ಏಕದಂತಗಳ ತಪ್ತ ಮುದ್ರಾಧಾರಣ ಮಾಡುತ್ತಾರೆ. ಇದರಿಂದ ಇದು ಮಧ್ವಾಚಾರ್ಯರ ತರುವಾಯ ಪ್ರಚಾರದಲ್ಲಿ ಬಂದ ಪಂಥವಾಗಿರಬಹುದು; 3. ಉಚ್ಛಿಷ್ಟ ಗಣಪತಿ; ಇವರು ವಾಮಮಾರ್ಗಿಗಳಾಗಿ ಶಾಕ್ತರಂತೆ ನಿಂದ್ಯಕರ್ಮಾಚರಣೆ ಮಾಡುವರು. 4. ನವನೀತ ಗಣಪತಿ; 5. ಸ್ವರ್ಣ ಗಣಪತಿ; 6. ಸಂತಾನ ಗಣಪತಿ; ಈ ಪಂಥದವರು ಗಣಪತಿಯೇ ಆದಿಪುರುಷನಾಗಿದ್ದುದರಿಂದ ಪ್ರತ್ಯೇಕ ಶುಭಾಶುಭಕಾರ್ಯಗಳಲ್ಲಿ ಅವನ ಪೂಜೆಯು ಪ್ರಚಾರದಲ್ಲಿ ಬಂತೆಂದು ಹೇಳುತ್ತಾರೆ. ಶ್ರೀ ಗಣಪತಿಯು ಸಬುದ್ಧಿ ಸುವಿದ್ಯೆಗಳನ್ನು ಕೊಡುವ ದೈವತವೆಂದು ತಿಳಿಯುತ್ತಾರೆ. ಶ್ರೀಗಣಪತಿಯ ಉಪಪತ್ತಿಯ ಸಂಬಂಧವಾಗಿ ಮುದ್ಗಲಪುರಾಣ, ಗಣೇಶಪುರಾಣ, ಗಣೇಶಭಾಗವತ, ಶಿವ ಪುರಾಣಗಳಲ್ಲಿ ಕಥೆಗಳಿರುತ್ತವೆ; ಇವು ತುಸು ತುಸು ಭಿನ್ನವಾಗಿರುತ್ತವೆ. ಶಿವಪುರಾಣದಲ್ಲಿರುವ ಕಥಾತಾತ್ಪರ್ಯವನ್ನು ಈ ಕೆಳಗೆ ಬರೆದಿದೆ.

**ಕಥಾತಾತ್ಪರ್ಯ :–** ಒಂದು ದಿನ ಪಾರ್ವತಿಯು ಸ್ನಾನಕ್ಕೆ ಹೋಗುವಾಗ ಯಾರನ್ನೂ ಒಳಗೆ ಬಿಡಬಾರದೆಂದು ನಂದಿಗೆ ನೇಮಿಸಿದಳು. ಆದರೆ ಈಶ್ವರನು ಬಂದು ನಂದಿಯು ತಡೆದರೂ ಕೇಳದೆ ಒಳಗೆ ಪ್ರವೇಶಿಸಿದ್ದರಿಂದ ಪಾರ್ವತಿಗೆ ಲಜ್ಜೆಯೂ ವಿಷಾದವೂ ಆಯಿತು. ಇದನ್ನು ನೋಡಿ ಜಯೆ ವಿಜಯೆಯರೆಂಬ ಸಖಿಯರು ಪಾರ್ವತಿಗೆ-'ಈ ಶಿವಕಿಂಕರರು ನಿನ್ನ ಮಾತು ನಡಿಸದ್ದರಿಂದ ಈ ಅನರ್ಥವೊದಗುತ್ತದೆ. ಕಾರಣ ನಿನ್ನ ಆಪ್ತನಾದವನನ್ನೇ ಭೃತ್ಯನನ್ನಾಗಿ ನೇಮಿಸುವುದು ಯುಕ್ತವು' ಎಂದು ಸಲಹೆ ಕೊಡಲು ಪಾರ್ವತಿಯು ಮಣ್ಣಿನ ಒಂದು ವಿಗ್ರಹವನ್ನು ಮಾಡಿ ಜೀವಕಳೆ ತುಂಬಿ-'ಮಗೂ ನೀನು ನನ್ನ ಮಗನಾಗಿ ಬಾಗಿಲ ಕಾಯುತ್ತಿರು; ಯಾರು ಬಂದರೂ ಬಿಡಬೇಡ' ಎಂದು ಖಂಡಿತವಾದ ಅಪ್ಪಣೆಯನ್ನಿತ್ತಳು. ಮುಂದೆ ಈಶ್ವರನು ಬಂದು ಒಳಗೆ ಹೋಗಲೆತ್ನಿಸಲು ಗಣೇಶನು ಬಿಡದ್ದರಿಂದ ಅವರೊಳಗೆ ಯುದ್ಧವಾಗಿ ಗಣೇಶನೇ ಜಯಶಾಲಿಯಾದನು. ಇದರಿಂದ ಈಶ್ವರನು ಸಿಟ್ಟಾಗಿ ತ್ರಿಶೂಲದಿಂದ ಗಣೇಶನ ತಲೆಯನ್ನು ಕತ್ತರಿಸಿದನು. ಈ ಪ್ರಕಾರ ತನ್ನ ಮಗನ ಮರಣವಾದ್ದನ್ನು ತಿಳಿದು ಪಾರ್ವತಿಯು ದುಃಖಿಸಲು ಅವನು ಗಜರಾಜನ ಮಸ್ತಕವನ್ನು ತಂದು ಈ ಮುಂಡಕ್ಕೆ ಜೋಡಿಸಿ ಜೀವಕಳೆಯನ್ನು ತುಂಬಿದನು. ಹಾಗೂ ಎಲ್ಲ ದೇವತೆಗಳೂ ಪಾರ್ವತಿಯ ಸಂವಿಧಾನಕ್ಕಾಗಿ ಅವನನ್ನು ತಮ್ಮ ಗಣಗಳಿಗೆ ನಾಯಕನನ್ನಾಗಿ ಮಾಡಿದ್ದಲ್ಲದೆ ಆದಿ ಪೂಜೆಯ ಮಾನವನ್ನೂ ಕೊಟ್ಟರು.

ಗಣಪತಿಯು ಪಾರ್ವತಿಯ ಗರ್ಭದಲ್ಲಿ ಜನಿಸಿದ ಮಗನು; ಶನಿಯ ದರ್ಶನದಿಂದ ಅವನ ತಲೆಯು ತುಂಡಾಯಿತು; ವಿಷ್ಣುವು ಪಾರ್ವತಿಯ ಸಮಾಧಾನಕ್ಕಾಗಿ ಆನೆಯ ಮುಖವನ್ನು ಜೋಡಿಸಿ ಆತನು ಜೀವಿಸುವಂತೆ ಮಾಡಿದನು ಹಾಗೂ ಆತನಿಗೆ ಆದಿಪೂಜೆಯ ಮಾನವನ್ನಿತ್ತನು, ಎಂದು ಬ್ರಹ್ಮವೈವರ್ತ ಪುರಾಣದಲ್ಲಿ ಹೇಳಿದೆ.

*(ಮುಂದುವರಿಯುವುದು)*

PAGE DONATED BY : **SMT. TRIVENI BHATSHIKAR & SHRI R. T. BHATSHIKAR, GHATKOPAR IN THE MEMORY OF LATE SHRI T. R. BHATSHIKAR**

# ಮುಂಬೈ ಕನ್ನಡ ಕವಿಗಳು : ವಿ. ಜಿ. ಭಟ್

✍ ಶೈಲಜಾ ಹೆಗಡೆ, ಮುಂಬಯಿ

*(ಕಳೆದ ಸಂಚಿಕೆಯಿಂದ)*

ಕನ್ನಡ ಸಾಹಿತ್ಯ ಸಂಸ್ಕೃತಿಯ ಪ್ರತೀಕವಾಗಿ 1985ರಲ್ಲಿ ವಿಶ್ವಕನ್ನಡ ಸಮ್ಮೇಳನವು ಮೈಸೂರಿನಲ್ಲಿ ಜರುಗಿತು. ಇದರ ಅಂಗವಾಗಿ ಪ್ರಕಟಗೊಂಡ ಪುಸ್ತಕಗಳಲ್ಲಿ ವಿ. ಜಿ. ಭಟ್ಟರು ರಚಿಸಿದ 'ಮರಳಿ ಬಂದ ಕವಿತೆ' ಎಂಬ ಕವನ ಸಂಕಲನವೂ ಪ್ರಮುಖವಾದುದು. ಅಂದು ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆಯವರು ಈ ಕೃತಿಗೆ ಮುನ್ನುಡಿಯ ನುಡಿಗಳನ್ನು ಬರೆದಿದ್ದಾರೆ. ದಶಕಗಳ ಕಾಲ ಸ್ಥಗಿತಗೊಂಡ ವಿ.ಜಿ.ಭಟ್ಟರ ಕಾವ್ಯಪ್ರವಾಹ ಪುನಃ ಜೀವನಾನುಭವದಿಂದ ಪರಿಪಕ್ವಗೊಂಡು ನವಸ್ಫೂರ್ತಿಯಿಂದ ಹರಿಯ ತೊಡಗಿದ್ದು ಪ್ರಸ್ತುತ ಕಾವ್ಯಸಂಕಲನದ ವಿಶೇಷತೆಯಾಗಿದೆ. 'ಆಡು ಮುಟ್ಟದ ಸೊಪ್ಪಿಲ್ಲ' ಎಂಬಂತೆ ವಿ.ಜಿ.ಭಟ್ಟರ ಲೇಖನಿಗೆ ಪಕ್ಕಾಗದ ವಿಷಯಗಳೇ ಇಲ್ಲ. ವೈಚಾರಿಕ, ಆಧ್ಯಾತ್ಮಿಕ, ವೈದ್ಯಕೀಯ ಹಾಗೂ ಕೆಲವು ದೀರ್ಘ ಕವನಗಳೂ, ಕಥನ ಕವನಗಳೂ ಈ ಸಂಕಲನದಲ್ಲಿವೆ. 'ಅರವತ್ತರ ಗಡಿಯಲ್ಲಿ' ಎಂಬ ಸುದೀರ್ಘ ಕವಿತೆಯ ಸಾಲುಗಳಲ್ಲಿ ಕವಿ ಭವರೋಗಕ್ಕೆ ಕಾವ್ಯವೇ ಚಿಕಿತ್ಸೆಯೆಂದೂ ಕವಿಯೇ ಭವರೋಗ ವೈದ್ಯನೆಂದೂ ಬಣ್ಣಿಸಿದ್ದಾರೆ. ಕವಿತೆಯ ಸಾಲುಗಳು,

ವೈದ್ಯನಾಗು ಕವಿರಾಜನಾಗು ಭವ-
ರೋಗಕೆ ಕಾವ್ಯ ಚಿಕಿತ್ಸೆ,
ಬಲು ಹಳೆಯ ಮಾತು, ಅನುಭವದ ಮಾತು
ಹಿಡಿ ತಿಳಿದು ಇದರ ದೀಕ್ಷೆ

ನಲವತ್ತರ ದಶಕದ ಭಾರತದಲ್ಲಿ ಮಾರ್ಕ್ಸವಾದದ ಪ್ರಭಾವ ಪ್ರಬಲವಾಗಿತ್ತು. ಅದರಿಂದ ಪ್ರಗತಿಶೀಲ ಸಾಹಿತ್ಯ ಚಳುವಳಿ ಹುಟ್ಟಿ ಕೊಂಡಿತು. ವಾಲ್ಟೇರ್, ಟಾಲ್‌ಸ್ಟಾಯ್, ಎಲಿಯೆಟ್ ಮೊದಲಾದ ಪಾಶ್ಚಾತ್ಯ ಕವಿಗಳ ವಿಚಾರಧಾರೆ ಭಾರತೀಯ ಕವಿಗಳಿಗೆ ಅನುಕರಣೀಯ ವೆನಿಸಿತು. ಪಾಶ್ಚಾತ್ಯ ಸಾಹಿತ್ಯದಲ್ಲಿ ಗತಿಯಿರುವ ವಿ.ಜಿ. ಭಟ್ಟರು ಜೇಮ್ಸ್ ರಸೆಲ್ ಅವರ ಗೀತೆಯೊಂದನ್ನು 'ಸ್ವಾತಂತ್ರ್ಯ' ಎಂಬ ನಾಮಧೇಯದಿಂದ ಭಾವಾನುವಾದ ಮಾಡಿದ್ದಾರೆ.

ಸ್ವಾತಂತ್ರ್ಯವುಂಟೆಂಬ
ಬಿಂಕವದು ಬರಿಜಂಬ
ಭುವಿಯೊಬ್ಬನು ಸೆರೆಯ ನರಕದಲ್ಲಿರಲು
ಬಾಂಧವರ ಬಂಧನವು
ದಾಸ್ಯದಾಕ್ರಂದನವು
ಮುಕ್ತಿಯುನ್ಮತ್ತತೆಗೆ ಜವಮಿಂಚಿನುರಲು

ಅಂದರೆ, ಭುವಿಯ ಬಂಧುಗಳಲ್ಲಿ ಒಬ್ಬ ಸೆರೆಯ ನರಕದಲ್ಲಿದ್ದರೂ ಸ್ವಾತಂತ್ರ್ಯಕ್ಕೆ ಯಾವುದೇ ಬೆಲೆ ಇಲ್ಲ. ಅದು ಬರಿ ಬಿಂಕವೆನಿಸುತ್ತದೆ. ಅದು ಜವಮಿಂಚಿನ ಉರುಲು ಎಂಬುದನ್ನು ಕವಿತೆ ಸಾರುತ್ತದೆ. ಅದೇ ರೀತಿ, ಭಾರತೀಯರ ಅಧೈರ್ಯ ಮತ್ತು ಹೇಡಿತನವನ್ನು 'ಬಂಡಾಯ' ಕವಿತೆ, ವಿಡಂಬನಾತ್ಮಕವಾಗಿ ಬಣ್ಣಿಸಿದೆ.



ಭಾರತ ಪುತ್ರರ ನರಕದಿ ನೂಕಿ
ರುಚಿ ನೋಡುವ ಈ ತೋಪು ತುಬಾಕಿ
ದುರಿಸೆ-ಬಿಳಿಯರ ಕೈಕೋವಿ
ಕರೆದರು ಬಾರನು ಗಾಂಡೀವಿ.
ಆಯಿತು ಅವನ ಅಯೋಧ್ಯೆಯು ಹೋಮ
ಆದರು ಬಾರನು ಆ ರಾಮ

ಕವಿ ವಿ. ಜಿ. ಭಟ್ಟರ 'ಕನಸಿನಲ್ಲಿ' ಎನ್ನುವ 'ಕಥನ ಕವಿತೆ' ಅಡವಿಯ ಪ್ರಾಣಿಗಳ ಗುಣಗಳನ್ನು ವೈವಿಧ್ಯಮಯವಾಗಿ ಚಿತ್ರಿಸಿದೆ. ಮಕ್ಕಳ ಕವಿತೆಗೆ ಹೆಸರಾದ ಕವಿ ಕವಿತಾ ಕೃಷ್ಣರ 'ಪ್ರಾಣಿಪ್ರಪಂಚ' ಕವಿತೆಯನ್ನು ಹೋಲುವ ಈ ಕವಿತೆಯ ಸಾಲುಗಳು ಇಂತಿವೆ.

ಕಾಡಿಗೆ ಹೋದೆನು ಕನಸಿನಲಿ
ಒಯ್ದಿತು ನನ್ನನು ಪಟ್ಟೆಹುಲಿ
ಸೊಂಡಿಲಿನಲಿ ತಣ್ಣೀರನು ತಂದು
ಆನೆಯು ಜಳಕವ ಮಾಡಿಸಿತು
ಮರಗಳು ನೀಡಿದ ಹಣ್ಣುಗಳನ್ನು
ಸಿಂಹವು ಊಡಿಸಿತು

ಮುಗ್ಧ ಮಕ್ಕಳ ಮನಸ್ಸನ್ನು ಆಕರ್ಷಿಸುವ ಮೇಲಿನ ಕಥನ ಕಾವ್ಯದ ಸಾಲುಗಳು ರೋಚಕವಾಗಿವೆ. ಭಟ್ಟರು ಪ್ರೌಢರನ್ನು ರಂಜಿಸುವ ಕಥನ ಕಾವ್ಯವನ್ನೂ ಗೇಯಯುಕ್ತವಾಗಿ ಹೆಣೆದಿದ್ದಾರೆ. ಶ್ರೀ ರಜನೀಶರ ಒಂದು ಕತೆಯನ್ನು 'ಮಣ್ಣು ಹುಳದ ಕತೆ' ಎಂಬ ಶೀರ್ಷಿಕೆಯಡಿಯಲ್ಲಿ ನಿರೂಪಿಸಿದ ಬಗೆ ಗಮನಾರ್ಹವಾದುದು.

ಹೀಗೊಂದು ಮುಂಜಾನೆ ಬೆಳಕು ಹರಿಯುವ ಮುಂಚೆ
ಇನ್ನೂ ಕೂಗುವ ಮುಂಚೆ ಕೋಳಿ
ನಡೆದೊಂದು ಕತೆಯನು ಹೇಳುವೆ ಗೆಳೆಯರೆ
ಮನವಿಟ್ಟು ಚೆನ್ನಾಗಿ ಕೇಳಿ

ಹೀಗೆ, ರಜನೀಶರು, ಅರವಿಂದರು, ಗೋಕಾಕರು, ಬೇಂದ್ರೆಯವರು ಮೊದಲಾದ ಸಾಹಿತ್ಯ ದಿಗ್ಗಜರ ಪ್ರಭಾವವನ್ನು ವಿ.ಜಿ.ಭಟ್ಟರ ಕಾವ್ಯದಲ್ಲಿ ಕಾಣಬಹುದು. ಇವರ 'ಮೂರ್ತಿ' ಕವಿತೆಯ 'ಈ ಗಾಳಿಯ ಬೆನ್ನ ಮೇಲೆ ಮೂರ್ತಿಯೊಂದ ಕೆತ್ತಬೇಕು' ಎಂಬ ಸಾಲು ವರಕವಿ ಬೇಂದ್ರೆಯವರ 'ಪಾತ್ರಗಿತ್ತಿ ಪಕ್ಕಾ' ಕವಿತೆಯ 'ಗಾಳಿ ಕೆನೀಲೇನ? ಮಾಡಿದ್ದಾರ ತಾನ?' ಸಾಲನ್ನು ಹೋಲುತ್ತದೆ. ಮೂರ್ತಿ ಕೆತ್ತುವ ಕಲ್ಪನೆಯನ್ನು ಕವಿ 'ಎಂಥ ಮೂರ್ತಿ', 'ಸಾಧನೆ, 'ರಗಳೆ' ಮುಂತಾದ ಕವಿತೆಯಲ್ಲಿ ಬಗೆಬಗೆಯಾಗಿ ವರ್ಣಿಸಿದ್ದಾರೆ. ಕವಿಗೆ ಮೂರ್ತಿಯನ್ನು ಬಣ್ಣಿಸಿದಷ್ಟೂ ಇನ್ನೂ ಬಣ್ಣಿಸುವ ಬಯಕೆ. ಈ ವಿಶಿಷ್ಟ ಬಣ್ಣನೆಯ ಕ್ರಮವನ್ನು ಮುಂಬಯಿಯ ಇತರ ಕವಿಗಳ ಕಾವ್ಯದಲ್ಲೂ ಗುರುತಿಸಬಹುದು. ತಾವು ಜೀವನೋಪಾಯಕ್ಕಾಗಿ ಆಶ್ರಯಿಸಿದ ಮುಂಬೈ ನಗರವನ್ನು ಭಟ್ಟರು ದುರ್ಗಂಧದ ಬೀಡೆಂದು ಕರೆದಿದ್ದಾರೆ. ಹಣ ಸಂಪಾದನೆಗೆಂದು ಹಳ್ಳಿಯ ಜನರು ನಗರವನ್ನು ಸೇರಿದುದರಿಂದ ಊರುಗಳು

*PAGE DONATED BY : **AKADAS & FAMILY***

# Significance of Shri Ramacharitamanasa

✍ **Shraddha Hegde** **(BE-Engg)**



***Prathama Sopaana-Balakanda :***

Great saint Tulsidas describes the dust of Guru's feet as tender and beautiful which acts like a divine syrup(Amrit) and removes all the defects from our vision. With the help of this brightened vision full of wisdom, Tulsidas proceeds to narrate the story of *Shrirama Charitra*. Afterall, Shri Rama is the one who helps us to attain salvation in this material world. He provides loving salutations to brahmana and all great souls, who are capable to remove all the doubts that are born out of ignorance. These people are like God on earth with mines of good qualities. Tulsi compares Pious people to a cotton plant, whose fruits are tasteless and light weight. But it goes through lot of hardships like ginning, spinning and weaving to cover our body. Similarly, noble people face suffering by hiding other's shortcomings. This is the reason why they succeed in life and are praiseworthy.

The society of saints and sages are full of joy and auspiciousness. Tulsidas considers them as a moving Prayaaga i.e., a sacred place. Prayaaga is a celebrated place of pilgrimage where there is a *Triveni* confluence of three rivers-Ganga, Yamuna, and Saraswati. The devotion to Shri Rama represents the holy Ganga River, and Saraswati River contributes to the absolute nature of Brahman. River Yamuna, daughter of Sun God resembles the discourses of Prescribed(Vidhi) and Prohibited(Nishedh Roopi) Actions which washes the impurities of Kaliyuga. We feel blessed by listening to this beautiful Triveni along with stories of Shri Vishnu and Lord Shankara. We should have unwavering faith in our religion which constitutes the immortal Banyan tree and good deeds represents holy place. If we take resort in this moving Prayaaga with respect, which is easily accessible to us ,it is bound to destroy all our tribulations. This is beyond description and bestows reward immediately. Men having heard the glory of this moving prayaaga i.e., preaching of saints, appreciate and follow it with devotion attain *purusharthas here only. All four purusharthas (Dharma-righteousness, Artha-economic values, Kama-desire, Moksha-liberation)* are important because they are the inherent values of the universe. Thus, the company of good people and saints brings out the best in us and supports us in the quest for truth and enlightenment.

*(To be continued...)*

---

ಇಂದು ಜನರಿಲ್ಲದೆ ಭಣ ಭಣ ಎನ್ನುತ್ತಿವೆ ಎಂಬ ವಾಸ್ತವಿಕ ಸತ್ಯವನ್ನು ಇಲ್ಲಿ ಅವರು ಎತ್ತಿಹಿಡಿದಿದ್ದಾರೆ. ವಿ.ಜಿ. ಭಟ್ಟರದು ನಿಷ್ಠುರವೆನಿಸಿದರೂ ನೇರ ನುಡಿ. ಸಮಾಜದಲ್ಲಿಯ ಮೂಢ ಆಚರಣೆಗಳನ್ನು ಅವರು ಕಟುವಾಗಿ ಖಂಡಿಸಿದ್ದಾರೆ. ಗೊಡ್ಡು ಸಂಪ್ರದಾಯಗಳನ್ನು ದಿಟ್ಟತನದಿಂದ ಅಲ್ಲಗಳೆದಿದ್ದಾರೆ. ಇವರ 'ಅರಿಯುತೇನೆ ನಡೆ' ಕೃತಿಯ ಬೆನ್ನುಡಿಯಲ್ಲಿ ಕವಿ ಚೆನ್ನವೀರ ಕಣವಿಯವರು, 'ನಿಮ್ಮ ಕಾವ್ಯ ಚೇತನ ಕನ್ನಡದಲ್ಲಿಯೇ ವಿಶಿಷ್ಟವಾದದ್ದು. ಇತ್ತೀಚಿನ ಈ ಸೃಷ್ಟಿ ನಿಜಕ್ಕೂ ವಿಸ್ಮಯಕರ. ಜೀವನದ ಬಗ್ಗೆ ನಿಮ್ಮದು ವಕ್ರದೃಷ್ಟಿ ಎಂದು ಮೇಲುನೋಟಕ್ಕೆ ಅನಿಸಿದರೂ ಅದರ ಅಗಾಧತೆಯನ್ನು ಹಗುರಾದ ಮಾತಿನಲ್ಲಿ ಮೂಡಿಸಿ 'ಅಧ್ಯಾತ್ಮ'ವನ್ನು ಬಳಸದೆಯೇ ಅದನ್ನು ಅನುಭವಕ್ಕೆ ಅಳವಡಿಸಿ ತೋರಿಸುವ ರೀತಿ ಅಚ್ಚರಿಪಡಿಸುವಂಥದು. ಭಾಷೆ, ಲಯ, ಧಾಟಿಗಳನ್ನು ಹೀಗೆ 'ಕೈವಶ' ಮಾಡಿಕೊಂಡು 'ಛಂದ'ಗೆಡದಂತೆ ಬರೆಯುವ ಕಲೆ ನಿಮಗೇ ಮೀಸಲೆನಿಸುವಂತಿದೆ. ನೀವು ಕಂಡ ಜೀವನದ ರಹಸ್ಯ ಓದುಗರನ್ನು ಚಿಂತನೆಗೆ ಪ್ರಚೋದಿಸುವುದರಲ್ಲಿ ಸಂದೇಹವಿಲ್ಲ-ಈ ಕಾವ್ಯದ ಮೂಲಕ' ಎಂದು ಪ್ರಶಂಸಿಸಿದ್ದಾರೆ.

1985ರಲ್ಲಿ 'ತರಂಗ' ಮಾಸಿಕ ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಸುದೀರ್ಘ ಮೌನಕ್ಕೆ ತಿರುಗಿದ್ದ ತನ್ನ ಕಾವ್ಯಕನ್ನಿಕೆ ಮತ್ತೆ ಸ್ಫೂರ್ತಿಯ ಸೆಲೆಯಾಗಿ ಹರಿದುಬಂದ ಬಗೆಯನ್ನು ವಿ.ಜಿ.ಭಟ್ಟರು ಮನದುಂಬಿ ಹೀಗೆ ವಿವರಿಸಿದ್ದಾರೆ. 'ಒಂದು ದಿನ ನಸುಕಿನಲ್ಲಿ ಕನಸೋ ನನಸೋ ತಿಳಿಯದ ಸ್ಥಿತಿಯಲ್ಲಿ ಬೆನ್ನಹುರಿಗೇ ಯಾರೋ ಧಡ್ಡನೆ ಒದ್ದಂತಾಯಿತು. ಸರಕ್ಕನೆ ನೆಟ್ಟಗೆದ್ದು ಕೂತೆ! ಬೆನ್ನ ಹುರಿಯಲ್ಲೇ ಕುಂಡಲಿನಿ ಜಾಗೃತವಾಯಿತೋ ಎಂಬಂತೆ ಆವೇಶ ಬಂದಂತಾಯಿತು. ಬರೆಯಲಾರಂಭಿಸಿದೆ. ಬರೆದಷ್ಟು ತಾಜಾತನ ಬರುತ್ತದೆ. ಯಾರಪ್ಪನ ಮನೆಗಂಟು ಹೋಗುತ್ತದೆ ಅಂತ ಬರೆದೇ ಬರೆದೆ!' ಎಂಬುದಾಗಿ ತಮಗಾದ ಪವಾಡಸದೃಶ ಅನುಭವವನ್ನು ಅವರು ಅನಾವರಣಗೊಳಿಸಿದ್ದಾರೆ. ಜನಪ್ರಿಯ ಕವಿ, ಕತೆಗಾರ ಜಯಂತ ಕಾಯ್ಕಿಣಿ ಅವರು ನಡೆಸಿದ ಪ್ರಸ್ತುತ ಸಂದರ್ಶನ, ಒಬ್ಬ ಶ್ರೇಷ್ಠ ಕವಿಯ ಅಂತರಾಳದ ಭಾವನೆಗಳನ್ನು ಇನ್ನೊಬ್ಬ ಶ್ರೇಷ್ಠ ಕವಿ ಮಾತ್ರ ಕೆದಕಿ ಹೊರ ಗೆಡಹಬಲ್ಲನೆಂಬುದಕ್ಕೆ ಇದು ಉತ್ತಮ ನಿದರ್ಶನವಾಗಿದೆ. ❍

*PAGE DONATED BY :* ***SHRI N. R. HEGDE, DOMBIVLI***

# FOOD AND BEYOND

✍ **L. V. Shastri, Bengaluru**

Talking about food would be touching the most basic and all too obvious requirement for living. Performing any activity needs energy that is provided by food. Getting food would be the necessary and sufficient condition for living in the case of many species. However, when it comes to human species, it would of course be necessary but not sufficient. That is how humans become unique among all living forms in the creation.

Indeed, nature has devised many perplexing schemes for preservation of different life forms. In one scheme one form becomes food for another - insects for spider and lizards, worms for birds, rodents for snakes and cats, animals for tigers and lions and so on. Some forms solely depend for their food on the produce from mother earth- like grass, leaves and vegetables. We refer to the former class as carnivorous and the latter as herbivorous. It is noteworthy that the choice of food has no direct relation with the physical strength of a species. We thus have elephants with huge size and physical strength being only herbivorous. The human species, considered as the highest form among all the species, happens to be both herbivorous and carnivorous!

Humans are, not just arguably but decidedly, the highest form among all the species. Humans would have asserted and established their superiority from the time they used fire for cooking and devised bow and arrow for hunting down animals. This superiority of human beings arises due to the power of mind and intellect that is bestowed on them. However, the position of food as the necessary condition for living has never been affected or altered.

Evolution of mind and intellect of the human species over several millenia has brought us to the present age of revolutionary technology which shows every sign of evolving ever further. Armed with sophisticated devices for experimentation, the field of scientific enquiry has extended to the cause and effect aspects in the creation of the unimaginably vast cosmos. However, even without any tools for verification, evolution of the intellect has addressed such questions and this realm of enquiry constitutes the philosophy system.

It is widely known that Indic philosophy regards the entire creation as the will and handwork of Brahman / Paramatma, the universal soul. The soul in individuals is called Jeevatma which is part and parcel of the universal soul. In as much as food creates and sustains life, Vedanta philosophy assigns some essence of Brahman to food! Taittiriyopanishad gives a highly intuitive description regarding the existence of Soul in the body, wherein the soul is covered by five sheaths - koshas- around it. The outermost sheath is that of food -Annamaya kosha. Others, in the order of approach to soul, are Pranamaya (breathing), Manomaya (emotions), Vigyanamaya (knowledge), the innermost being Anandamaya (happiness, bliss). The first four layers would pertain to the issues that most individuals are preoccupied with during their entire life span. However, attaining enlightenment / knowledge of Self is regarded as the highest goal for human beings, that is, transcending the first four koshas and attaining / experiencing the state of eternal bliss. In other words, Jeevatma merges with Brahman /Paramatma). In poetic terms, river would merge with the ocean.



Philosophy apart, in real life situations, providing for food would be the first and foremost concern for large majority of individuals. It would be for oneself and the dependent family members with whom one is attached emotionally. After this, there would be factors propelling one to various types of actions. It could be just an inner motivation to acquire knowledge and attain levels par excellence. This would be the case for the 'achievers' in different knowledge based fields of enquiry. Then, at some point in time, one may start asking oneself 'where is the end to my pursuits that seem endless? Or,' what is my true nature?' - initiation into the knowledge of self. We thus see the prudence in the concept of koshas of vedanta to human living.

Greed is a powerful factor that propels one to acquire more. It may be about material possessions, fame in society etc. When motivated by sheer greed, one may employ both fair and foul means to satiate greed - something that would be very difficult. Gandhiji, famously, has said 'there is enough (in terms of the basic needs like food) for everyone's need but not for everyone's greed'. However, unequal distribution of the basic needs like food, good health or education among the people has divided humanity into poor and rich class. This fact is what has motivated some to take up philanthropy, helping the needy and less fortunate in the society by offering a helping hand in whatever way possible.

To summarize, after providing for food, the basic need for living, many would yearn for many other things like being contented emotionally, seeking knowledge in different fields and understanding the purpose and goal for living. It is indeed remarkable and a matter of pride that the concepts developed in Indian philosophy millennia ago hold relevance even today and probably at all times in future for humanity to decipher its place and role in the entire CREATION. ❍

*PAGE DONATED BY : **SHRI ROKESH HEGDE & FAMILY, DAHISAR***

# ಮುಂಬೈಯಲ್ಲಿ ಕನ್ನಡ ಶೋಧ ಕಾಯಕ

✍ ಡಾ. ಜಿ. ಎನ್. ಉಪಾಧ್ಯ, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು,
ಕನ್ನಡ ವಿಭಾಗ, ಮುಂಬೈ ವಿಶ್ವವಿದ್ಯಾಲಯ

ಕೃತಿ : **ಕನ್ನಡ ಸಂಶೋಧನೆಗೆ ಮುಂಬೈ ಕೊಡುಗೆ**

ಲೇಖಕರು : ಕಲಾ ಭಾಗ್ವತ್

ಪ್ರಕಾಶನ : ಕನ್ನಡ ವಿಭಾಗ, ಮುಂಬೈ ವಿಶ್ವವಿದ್ಯಾಲಯ, ಮುಂಬೈ.

ಪುಟಗಳು : 128


ವರ್ಷ : 2023

ಬೆಲೆ : 100

ಸಂಶೋಧನೆ ಒಂದು ನಿರಂತರವಾದ ಶ್ರಮದಾಯಕ ಚಟುವಟಿಕೆ. ಜ್ಞಾನದ ದಿಗಂತವನ್ನು ವಿಸ್ತರಿಸುವ, ವಿಶ್ಲೇಷಿಸುವ, ಸೋಸುವ ಪ್ರಕ್ರಿಯೆ ಇದಾಗಿದೆ. ಆಧಾರಗಳ ಮೇಲೆ ನಡೆದು ಸತ್ಯವನ್ನು, ಹೊಸತು ಹೊಸತನ್ನು ಅನಾವರಣಗೊಳಿಸುವ ಕಾರ್ಯವನ್ನು ಸಂಶೋಧಕ ಮಾಡುತ್ತಲೇ ಇರಬೇಕಾಗುತ್ತದೆ. ನಮ್ಮ ಉದಾಸೀನ ಪ್ರವೃತ್ತಿಯಿಂದಾಗಿ ಮುಚ್ಚಿ ಹೋದ ಕರ್ನಾಟಕ ಸಂಸ್ಕೃತಿಯ ಬಾಗಿಲುಗಳನ್ನು ತೆರೆದು ತೋರಿದ ಮುಂಬೈ ಭಾಗದ ಸಂಶೋಧನ ಕಾರ್ಯದ ಪಕ್ಷಿ ನೋಟವನ್ನು ಸಶಕ್ತವಾಗಿ ದಾಖಲಿಸಿರುವುದು ಪ್ರಸ್ತುತ ಕೃತಿಯ ಅತಿಶಯತೆ.

ಅನ್ಯಾನ್ಯ ಕಾರಣಗಳಿಂದ ಮುಂಬೈಗೆ ವಲಸೆ ಬಂದ ಕನ್ನಡಿಗರು ವಿವಿಧ ಕ್ಷೇತ್ರಗಳಲ್ಲಿ ಮಾಡಿದ ಸಾಹಸ ಸಾಧನೆ ಅವಲೋಕನೀಯವಾಗಿದೆ. ಮುಂಬೈ ಕನ್ನಡ ಸಾಹಿತ್ಯ ಚರಿತ್ರೆಗೆ ಹತ್ತಿರ ಹತ್ತಿರ ನೂರೈವತ್ತು ವರ್ಷಗಳ ಗಟ್ಟಿಯಾದ ಇತಿಹಾಸವಿದೆ. ಹೊಸಗನ್ನಡ ಸಾಹಿತ್ಯ ಏಕಕಾಲಕ್ಕೆ ಧಾರವಾಡ, ಮೈಸೂರು, ಮಂಗಳೂರು ಹಾಗೂ ಮುಂಬೈ ವಲಯಗಳಲ್ಲಿ ತುಂಬಿ ತೀವಿ ಬಂದದ್ದು ಎಲ್ಲರಿಗೂ ಗೊತ್ತಿರುವ ಸಂಗತಿ. ಸಾಹಿತ್ಯ ವಲಯವಾಗಿ ಮುಂಬೈ ಹೆಸರು ಮಾಡಿದೆ. ಈ ಪರಂಪರೆ ಇಂದಿಗೂ ಸಾಗಿ ಬಂದಿದೆ. ಮುಂಬೈಯನ್ನು ಸಾಹಿತ್ಯ ವಲಯವಾಗಿ ರೂಪಿಸುವಲ್ಲಿ ಪಾಶ್ಚಾತ್ಯ ವಿದ್ವಾಂಸರು ನೀಡಿದ ಕೊಡುಗೆ ಗಮನಾರ್ಹವಾದದ್ದು. ಜೆ.ಎಫ್ ಫ್ಲೀಟ್, ರಸೆಲ್, ಫಾದರ್ ಹೆರಾಸ್ ಮೊದಲಾದವರು ಈ ನಿಟ್ಟಿನಲ್ಲಿ ನಮಗೆ ಪ್ರಾತಃಸ್ಮರಣೀಯ ರಾಗಿದ್ದಾರೆ. ಸಂಶೋಧನೆಗೆ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡು ಕನ್ನಡ ನಾಡಿನ ಹಿರಿದಾದ ಸಾಂಸ್ಕೃತಿಕ ಪರಂಪರೆಗೆ ಮುಂಬೈ ಭಾಗದ ವಿದ್ವಾಂಸರು ನೀಡಿದ ಕಾಣಿಕೆ ಅತ್ಯಂತ ಮೌಲಿಕವಾದದ್ದು ಎಂಬುದನ್ನು ಕಲಾ ಭಾಗ್ವತ್ ಅವರು ಈ ಕೃತಿಯಲ್ಲಿ ಸೊಗಸಾಗಿ ನಿರೂಪಿಸಿದ್ದಾರೆ. ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಕನ್ನಡ ಸಂಶೋಧನೆಯ ದಾರಿಯನ್ನು ಸ್ಪಷ್ಟವಾಗುವಂತೆ ಮಾಡಿದ್ದು ಮುಂಬೈನ ಆರಂಭದ ಘಟ್ಟದ ಸಂಶೋಧಕರ ದೊಡ್ಡ ಸಾಧನೆ. ಅವರು ಇಂಗ್ಲೀಷ್ ಭಾಷೆಯಲ್ಲಿ ಅನೇಕ ಶೋಧ ಕೃತಿಗಳನ್ನು ಬರೆದು ಪ್ರಕಟಿಸುವ ಮುಖಾಂತರ ಕನ್ನಡ ಸಂಶೋಧನ ವಲಯವನ್ನು ವಿಸ್ತಾರವಾಗುವಂತೆ ಮಾಡಿದರು.

ಆ ಬಳಿಕ ಬಂದ ದೇಸಿ ವಿದ್ವಾಂಸರಾದ ಸೂರಿ ವೆಂಕಟರಮಣ ಶಾಸ್ತ್ರಿ, ಶ್ಯಾಮರಾವ ವಿಠ್ಠಲ ಕೈಕಿಣಿ, ರಾ. ಹ. ದೇಶಪಾಂಡೆ, ಕೆ.ಜಿ ಕುಂದಣಗಾರ, ಡಿ. ಎಸ್. ಕರ್ಕಿಯವರ ಯೋಗದಾನ ಬಲು ದೊಡ್ಡದು.




ಕನ್ನಡ ನಾಡಿಗೆ ಸಂಬಂಧಿಸಿದ ಅಪೂರ್ವ ಸಂಶೋಧನ ಕೃತಿಗಳನ್ನು ರಚಿಸಿದ ಮೊರಾಯಿಸ್, ದಿನಕರ ದೇಸಾಯಿ, ಸೇತು ಮಾಧವರಾವ ಪಗಡಿ, ಶ್ರೀನಿವಾಸ ಹಾವನೂರು, ತಾಳ್ತಜೆ ವಸಂತಕುಮಾರ, ಬಾಬು ಶಿವ ಪೂಜಾರಿ, ಪ್ರಹ್ಲಾದ ಮುದ್ಗಲ್ ಮೊದಲಾದ ಮುಂಬೈ ಭಾಗದ ವಿದ್ವಾಂಸರ ಶೋಧ ಸಾಧನೆ ಈ ಕೃತಿಯಲ್ಲಿ ಸ್ಥೂಲ ನೆಲೆಯಲ್ಲಿ ದಾಖಲಾಗಿದೆ. ನಮ್ಮ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ಎತ್ತಿ ನಿಲ್ಲಿಸಿದ, ಮುನ್ನೆಲೆಗೆ ತಂದ ಪೂರ್ವ ಸೂರಿಗಳ ಶೋಧ ವೃತ್ತಾಂತವನ್ನು ಕಲಾ ಭಾಗ್ವತ್ ಅವರು ಪ್ರಸ್ತುತ ಕೃತಿಯಲ್ಲಿ ಮೊಟ್ಟಮೊದಲ ಬಾರಿಗೆ ವಿವರಿಸಿ ವಿಶ್ಲೇಷಣೆ ಮಾಡಿರುವುದು ಉಲ್ಲೇಖನೀಯ ಅಂಶ. ಕಲಾ ಅವರು ಬಹಳ ಶ್ರಮ ವಹಿಸಿ, ದುರ್ಲಭವಾಗಿರುವ ಕೃತಿಗಳನ್ನು ಸಂಗ್ರಹಿಸಿ, ಈ ಭಾಗದ ಸಂಶೋಧನ ರಂಗದಲ್ಲಿ ಮಿಂಚಿದ ಸಾಧಕರ ಸಂಶೋಧನ ಪರಿಚಾರಿಕೆಯನ್ನು ಇಲ್ಲಿ ವಸ್ತುನಿಷ್ಠವಾಗಿ ವಿಶ್ಲೇಷಿಸಿದ್ದಾರೆ.

ಚರಿತ್ರೆ ಮತ್ತು ಸಾಹಿತ್ಯದ ವಿವಿಧ ಆಕರಗಳನ್ನು ಉಪಯೋಗಿಸಿಕೊಂಡು ನಮ್ಮ ನಾಡಿನ ಸಾಂಸ್ಕೃತಿಕ ಅಧ್ಯಯನ ನಡೆಸಿದ ಮುಂಬೈ ಭಾಗದ ವಿದ್ವಾಂಸರು ಸಾಹಿತ್ಯ ಮತ್ತು ಚರಿತ್ರೆಯ ಸಮನ್ವಯಕಾರರಾಗಿ ಕೆಲಸ ಮಾಡಿದ್ದನ್ನು ಇಲ್ಲಿ ಅವರು ಲೋಕಮುಖಕ್ಕೆ ಪರಿಚಯಿಸಿರುವುದು ಈ ಕೃತಿಯ ಧನಾತ್ಮಕ ಅಂಶ. ಬಹುಕಾಲ ನಿಲ್ಲಬಲ್ಲ, ಮಹತ್ವದ ಸಂಗತಿಗಳನ್ನು ದಾಟಿಸಬಲ್ಲ, ತಾಕತ್ತುಳ್ಳ ಶೋಧ ಕೃತಿಗಳನ್ನು ನೀಡಿದ ಹಿರಿಮೆ ಮುಂಬೈನ ಕನ್ನಡ ವಿದ್ವಾಂಸರಿಗೆ ಸಲ್ಲುತ್ತದೆ ಎಂಬುದನ್ನು ಕಲಾ ಭಾಗ್ವತ್ ಅವರು ಈ ಕೃತಿಯಲ್ಲಿ ಸಾಧಾರವಾಗಿ ತೋರಿಸಿಕೊಟ್ಟಿದ್ದಾರೆ. ಈ ಭಾಗದ ಸಂಶೋಧಕರು ಬಹುಭಾಷಿಕ ಸಂವೇದನೆಯನ್ನು ಮೈಗೂಡಿಸಿಕೊಂಡು, ಅಂತರ್ ಶಿಸ್ತೀಯ ಅಧ್ಯಯನ ಕೈಗೊಂಡು ಪ್ರಾಚೀನ ಹಾಗೂ ಅರ್ವಾಚೀನ ಕೃತಿ, ಸಂಸ್ಕೃತಿಗಳ ಅನುಸಂಧಾನಕಾರರಾಗಿ ಮಿಂಚಿದ ಬಗೆಯನ್ನು ಇಲ್ಲಿ ಬೊಟ್ಟು ಮಾಡಿ ತೋರಿಸಿದ್ದಾರೆ. ಈವರೆಗೆ ಮುಂಬೈ ಭಾಗದ ಸಂಶೋಧನ ಚಟುವಟಿಕೆಗಳ ಮೇಲೆ ಬೆಳಕು ಬೀರುವ ಯಾವುದೇ ಕೃತಿ ಬೆಳಕು ಕಂಡಿರಲಿಲ್ಲ. ಹೀಗಾಗಿ ಕಲಾ ಭಾಗ್ವತ್ ಅವರ ಪ್ರಸ್ತುತ ಕೃತಿಯು ಅನೇಕ ರೀತಿಯಲ್ಲಿ ಸಾಹಿತ್ಯಾಸಕ್ತರಿಗೆ, ವಿದ್ವಾಂಸರಿಗೆ ಆಕರ ಗ್ರಂಥವಾಗಿದೆ. ಹೊರನಾಡಿನಲ್ಲಿ ತಮ್ಮ ಸಂಶೋಧನ ಕಾರ್ಯದ ಮುಖಾಂತರವಾಗಿ ಕನ್ನಡವನ್ನು ಬೆಳಗಿಸಿದ ಈ ಭಾಗದ ವಿದ್ವಾಂಸರ ಸಾಧನೆ ಈ ಮುಖಾಂತರವಾಗಿ ಇತಿಹಾಸಕ್ಕೆ ಸೇರ್ಪಡೆಯಾಗುವಂತೆ ಆಗಿದೆ. ಮುಂಬೈ ವಿಶ್ವವಿದ್ಯಾಲಯ ನಮ್ಮ ದೇಶದ ಮೊದಲ ವಿಶ್ವವಿದ್ಯಾಲಯ ಗಳಲ್ಲಿ ಒಂದು.

*(ಹತ್ತನೇ ಪುಟಕ್ಕೆ)*

*PAGE DONATED BY :* ***SHRI ANANT GANESH BHAT, BANDRA & FAMILY***

# ಮಡಿವಂತಿಕೆ

✍ ಶಶಿಕಲಾ ಹೆಗಡೆ, ಮುಂಬಯಿ



*(ಕಳೆದ ಸಂಚಿಕೆಯಿಂದ)*

ದೊಡ್ಡಮ್ಮನಲ್ಲಿ ದೂರಿದಳು.

"ಅಂವ ನಾಗಪ್ಪ ಅಲ್ದಕೆ, ಬೇರೆ ಯಾರೋ ಆಯಿಕ್ಕು"

ದೊಡ್ಡಮ್ಮನ ಸಮಾಧಾನದ ನುಡಿ.

"ಇಲ್ಯಪ, ಅಂವ ನಾಗಪ್ಪನೇಯ, ನಂಗೆಂತ ನಾಗಪ್ನ ಗುರ್ತ ತಿಳಿತಿಲ್ಯಾ?"

ಎಂದು ಗೊಣಗಿ, ಕತ್ತಲಾಗುತ್ತಿರುವುದನ್ನು ಕಂಡು ಸುಮಾ ಮನೆಗೆ ಬಂದಿದ್ದಳು.

ಮಾರನೆ ದಿನ ಬೆಳಿಗ್ಗೆ ಗಂಗೆ ಬಂದೊಡನೆ ಅವಳಲ್ಲಿ

"ಆ ನಾಗಪ್ಪಂಗೆ ಎಂತ ಆಗದ್ಯೇ, ನಾ ನಿನ್ನೆ ಕರದ್ರೂ ಕೇಳಗಿದ್ದವ್ರ ಹಾಂಗೆ ಹೋದ್ನಪ, ಅವಂಗೆ ಹೇಳು ತಂಗಿ ಬಾ ಹೇಳದೆ ಅಂದಿ. ನಾ ಮದ್ವೆ ಆಯ್ಕಂಡು ಹೋದ್ಮೇಲೆ ಮುರ್ನಾಲ್ಕು ವರ್ಷ ಬರುದಿಲ್ಲಂತೆ ಹೇಳೂ ಹೇಳು"

ಗುಟ್ಟಾಗಿ ಮಾತನಾಡಿದ್ದಳು ಸುಮಾ. ಗಂಗೆ ಹ್ಞೂಂ ಎಂದು ತಲೆಯಾಡಿಸಿದ್ದಳು.

ನೋಡ ನೊಡುತ್ತಲೆ ಮದುವೆಯ ದಿನ ಬಂದೇಬಿಟ್ಟಿತ್ತು. ನೆಂಟರಿಷ್ಟರ ಮಾತು, ನಗುವಿನಿಂದ ಮನೆ ಕಲ ಕಲ ಎನ್ನುತ್ತಿತ್ತು. ಬಣ್ಣಬಣ್ಣದ ಪಟ್ಟೆ ಸೀರೆಯುಟ್ಟು ಮೈತುಂಬ ಒಡವೆಗಳನ್ನು ಹೇರಿಕೊಂಡು ಸೆರಗು ನೇವರಿಸಿಕೊಳ್ಳುತ್ತಾ ಓಡಾಡುವ ಹೆಂಗಸರು, ಬಿಳಿ ಪಂಜೆಯುಟ್ಟು ಹೆಗಲ ಮೇಲಿನ ಶಾಲನ್ನು ಸರಿಪಡಿಸಿಕೊಳ್ಳುತ್ತಾ ಅವಸರದಿಂದ ಓಡಾಡುವ ಗಂಡಸರಿಂದ ಮದುವೆ ಮನೆ ರಂಗೇರಿತ್ತು. ಹರೆಯದ ಹುಡುಗ ಹುಡುಗಿಯರು ಪರಸ್ಪರ ಕುಡಿನೋಟಗಳಿಂದ ಮಾತನಾಡಿಕೊಳ್ಳುತ್ತಿದ್ದರು. ಹೊಸ ಬಟ್ಟೆ ಧರಿಸಿ ಕೆಲಸವಿಲ್ಲದಿದ್ದರೂ ಸುಮ್ಮನೆ ಅತ್ತಿತ್ತ ಕುಣಿದಾಡುವ ಮಕ್ಕಳು ಒಮ್ಮೆ ವಾಲಗದವರ ಸುತ್ತ ನೆರೆದರೆ ಇನ್ನೊಮ್ಮೆ ವಿಶೇಷವೆಂದು ಕಾಣುತ್ತಿದ್ದ ವೀಡಿಯೋದವನ ಹಿಂದೆ ಓಡುತ್ತಿದ್ದರು. ರಸ್ತೆಯ ಮೇಲೆ ಮಾವಿನ ಎಲೆಗಳು, ಬಾಳೆಯ ಮರಗಳಿಂದ ಕಟ್ಟಿದ ತೋರಣ ಹಸಿರಾಗಿ ನಗುತ್ತಾ ಎಲ್ಲರನ್ನು ಸ್ವಾಗತಿಸುತ್ತಿತ್ತು. ಅಡಿಗೆಯ ಚಪ್ಪರದ ವಿವಿಧ ಭಕ್ಷ್ಯಗಳ ಘಮ ಎಲ್ಲೆಡೆ 'ಆಹಾ' ಎನ್ನುವಂತೆ ಹರಡತೊಡಗಿತ್ತು.

ಅರಿಶಿನ, ಕುಂಕುಮದ ತಟ್ಟೆಗಳು, ಪುಟ್ಟ ಪುಟ್ಟ ಅತ್ತರಿನ ಬಾಟಲಿಗಳು, ಮಲ್ಲಿಗೆಯ ಮಾಲೆಗಳು ಹೆಂಗಳೆಯರನ್ನು ಸಿಂಗರಿಸಲು ಸಜ್ಜಾಗಿದ್ದವು. ಹೊಂಬಣ್ಣದ ಬಾಳೆಗೊನೆಗಳು, ಪನಿವಾರದ ಬಟ್ಟಲುಗಳು ನೆಂಟರಿಷ್ಟರ ಆತಿಥ್ಯಕ್ಕಾಗಿ ಉಗ್ರಾಣ ಕೋಣೆಯಲ್ಲಿ ಶಿಸ್ತಿನಿಂದ ತಯಾರಾಗಿ ಕುಳಿತ್ತಿದ್ದವು.

ಹಿರಿಯ ಹೆಂಗಳೆಯರು ಬೆಳಗಿನ ಜಾವದಲ್ಲಿ ಸುಮಾಳನ್ನು ಕಲಶದ ನೀರಿನಿಂದ ಮೀಯಿಸಿ, ಅಲಂಕರಿಸಿಕೊಳ್ಳಲು ಅವಳ ಕೋಣೆಗೆ ಕಳಿಸಿದ್ದರು. ಅತಿಯಾದ ಮೇಕಪ್ ಬೇಡ ಎಂದು ಅವಳು ಗೋಗರೆದರೂ ಕೇಳದೆ ಅವಳ ಗೆಳತಿಯರು ಅವಳನ್ನು ಸರ್ವಾಲಂಕಾರ ಭೂಷಿತೆಯನ್ನಾಗಿಸುವ ಸಂಭ್ರಮದಲ್ಲಿದ್ದರು. ದಿಬ್ಬಾಣದ ಗಾಡಿ ಬಂದೊಡನೆ ಎಲ್ಲೆಲ್ಲಿಯೂ ಮಿಂಚಿನ ಸಂಚಾರವಾದಂತೆ. ಗಂಡಿನವರನ್ನು ಇದಿರುಗೊಳ್ಳಲು ಹಿರಿಯರೆಲ್ಲ ಮುನ್ನಡೆದರು. ದಿಬ್ಬಣಿಗರ ಮೇಲೆ ಅರಳನ್ನು ಎರಚಿ, ಮದು ಮಗನಿಗೆ ಹಾನವನ್ನು ತೋರಿಸಿ, ಸ್ವಾಗತ. ಸಭಾಪೂಜೆ, ಪಾನಕ ಪನಿವಾರಗಳ ಸಮಾರಾಧನೆಯ ನಡುವೆ, ಮದುಮಗಳನ್ನು ಮಂಟಪಕ್ಕೆ ಕರೆತರುವ ಸಡಗರ. ಕಣ್ಣು ಹಾಯಿಸಿದಲ್ಲೆಲ್ಲ ಸಂಭ್ರಮದ ನೋಟ. ಪಟ್ಟೆ ಕುಂಕುಮ, ನೆತ್ತಿ ಸಿಂಗಾರದೊಂದಿಗೆ ಬಾಸಿಂಗವನ್ನು ಕಟ್ಟಿಕೊಂಡು ಸಾಲಂಕೃತಳಾದ ಸುಮಾ ದೃಷ್ಟಿ ಬೀಳುವಂತೆ ಸುಂದರವಾಗಿ ಕಾಣುತ್ತಿದ್ದಳು. ತುಟಿಗಳ ಮೇಲಿನ ಕಿರುನಗೆ ಅವಳ ಅಂದವನ್ನು ಹೆಚ್ಚಿಸಿತ್ತು. ಏರುದನಿಯ ವಾಲಗದ ಸದ್ದಿನ ನಡುವೆ ಲಯವಾದ ಕಿರುಗೆಜ್ಜೆಯ ಸದ್ದಿನೊಂದಿಗೆ ವರಮಾಲೆಯನ್ನು ಹಿಡಿದು ಮಂಟಪ ಪ್ರವೇಶಿಸಿದಳು ಸುಮಾ.

ಅಂತರ್ ಪಟ ಸರಿದೊಡನೆ ಪರಸ್ಪರ ಕಣ್ನೋಟಗಳ ಮಿಲನ, ಕಿರುನಗೆ ಮದುಮಕ್ಕಳ ಮೊಗದಲ್ಲಿ. ಧಾರೆಯ ನೀರು ಇಬ್ಬರ ಕೈಯಲ್ಲೂ ಹರಿದು ಹೃದಯ ತೇವವಾದಂತಹ ಪುಳಕ. "ಶುಭ ಮಂಗಳ ಸಾವಧಾನೇ ಸುಮುಹೂರ್ತೇ ಸಾವಧಾನೇ" ಪುರೋಹಿತರ ಮಂಗಳ ಮಂತ್ರಘೋಷಗಳು ಮೊಳಗುತ್ತಿದ್ದಂತೆ ಮಾಂಗಲ್ಯಧಾರಣೆ. ಪಾಣಿಗ್ರಹಣ ಮಾಡಿ ಪವಿತ್ರವಾದ ಮನಸ್ಸಿನಿಂದ ಸಪ್ತಪದಿ ತುಳಿಯುವ ಧನ್ಯತಾ ಭಾವ. ಆಶೀರ್ವಾದ ರೂಪದಲ್ಲಿ ನೆರೆದವರಿಂದ ಅಕ್ಷತೆಯ ಸುರಿಮಳೆ. ಸುಮಾ ಪ್ರಕಾಶ ಮದುವೆಯೆಂಬ ಸುಂದರ ಬಂಧನದಲ್ಲಿ ಒಂದಾಗಿದ್ದರು. ಹಲವಾರು ವರ್ಷಗಳಿಂದ ಹಿರಿಯರು ಕಂಡ ಕನಸು ನನಸಾಗಿತ್ತು.

ಒಂದುಕಡೆ ಮಂಗಳ ಹೋಮಗಳು ನಡೆಯುತ್ತಿದ್ದರೆ ಇನ್ನೊಂದೆಡೆ ಊಟೋಪಚಾರ ಭರದಿಂದ ಸಾಗಿತ್ತು. ಅಪ್ಪಯ್ಯ ಭಟ್ಟರು, ಅಚ್ಚಮ್ಮ ಎಡಬಿಡದೆ ಓಡಾಡುತ್ತಾ ಅಥಿತಿಗಳ ಆದರೋಪಚಾರದಲ್ಲಿ ತೊಡಗಿದ್ದರು. ಶಾಸ್ತ್ರಕ್ಕಾದರೂ ಊಟ ಮಾಡಲೆಂದು ಕುಳಿತ ಅವರಿಬ್ಬರ ಗಂಟಲಿನಲ್ಲೂ ಅನ್ನವಿಳಿಯಲಿಲ್ಲ. ಇನ್ನು ಕೆಲವು ಕ್ಷಣಗಳಲ್ಲಿ ತಮ್ಮ ಮುದ್ದಿನ ಮಗಳು ಗಂಡನ ಮನೆಗೆ ಹೊರಟುಬಿಡುತ್ತಾಳೆ ಎಂಬ ಸಂಕಟ. ಮುಂದಿನ ಜವಾಬ್ದಾರಿ ಕೈಬೀಸಿ ಕರೆಯುತ್ತಿರುವುದರಿಂದ ಹೇಗೊ ನಾಲ್ಕು ತುತ್ತನ್ನುಂಡು ಎದ್ದರು.

ದೇವರಿಗೆ, ಹಿರಿಯರಿಗೆ ವಂದಿಸಿ ಹೊರಟ ಮದುಮಕ್ಕಳು ಅಂಗಳಕ್ಕೆ ಬರುವಷ್ಟರಲ್ಲಿ ಗಂಡಾಳು, ಹೆಣ್ಣಾಳುಗಳೆಲ್ಲಾ ಸಾಲಾಗಿ ನಿಂತಿದ್ದರು. ತಮ್ಮ ಪ್ರೀತಿಯ ತಂಗಿಯನ್ನು ಬೀಳ್ಕೊಡುವುದು ಅವರಿಗೂ ಸುಲಭದ ಮಾತಾಗಿರಲಿಲ್ಲ. ನಾರಣ ಮುಂದೆ ಬಂದು ತನ್ನ ಕೈಯಲ್ಲಿದ್ದ ಪಂಜೆಯನ್ನು ಪ್ರಕಾಶನ ಹೆಗಲಿಗೆ ಹಾಕಿ, ಸೀರೆಯನ್ನು ಸುಮಾಳಿಗೆ ಹೊದೆಸಿದ.

"ತಂಗೀ, ನಾವೆಲ್ಲ ಕೂಡಿ ತಕಬಂದರೆ ಇದ್ರನ್ನ"

PAGE DONATED BY : **SHRI V. G. BHAT, NIGDI**

ಇಷ್ಟು ಹೇಳುವಷ್ಟರಲ್ಲಿ ಅವನ ಗಂಟಲು ಕಟ್ಟಿ ಬಂದಿತ್ತು. ಹೆಂಗಸರ ಗುಂಪಿನಿಂದ ಬಿಕ್ಕುವ ಶಬ್ದವೂ ಕೇಳಿಬಂತು. ನೀರು ತುಂಬಿದ ಕಂಗಳಿಂದ ಸುಮಾ ಅಣ್ಣನಿಗೆ ಸನ್ನೆ ಮಾಡಿದಳು. ಅವಳ ಇಂಗಿತವರಿತ ಅಣ್ಣ ಕೂಡಲೇ ಅಟ್ಟಕ್ಕೆ ಹೋಗಿ ದೊಡ್ಡ ಚೀಲವೊಂದನ್ನು ಹೊತ್ತು ತಂದು ಸುಮಾಳ ಮುಂದಿಟ್ಟ. ಗಂಡಾಳುಗಳ ಕೈಗೆ ಟವೆಲ್ಲು ಪಂಜೆಗಳನ್ನು ಹಿಡಿಸುತ್ತ, ನೆಲಮುಟ್ಟಿ ನಮಸ್ಕರಿಸುತ್ತ ಬಂದಳು ಸುಮಾ.

"ಥೋ, ತಂಗಿ ಹಾಂಗೆಲಾ ಮಾಡಬೇಡ್ವೇ" ಎಂದು ಎಲ್ಲರ ಉದ್ಗಾರ.

ಹೆಣ್ಣಾಳುಗಳಿಗೆ ಸೀರೆಯನ್ನು ಕೊಡುತ್ತಾ, ಎಲ್ಲರನ್ನೂ ತಬ್ಬಿಕೊಂಡಳು.

"ತಂಗೀ, ವಡಿದೀರು ಎಲ್ಲರಿಗೂ ಸೀರೆ ಕೊಟ್ಟರೆ. ನೀ ಮತ್ ಯೆಂತಕೆ ತಂದಿದ್ಯೇ"

ಅಳುತ್ತಳುತ್ತಲೇ ನುಡಿದಿದ್ದಳು ಮಾದಿ.

"ತಂಗಿ, ಬೇಗ ಬಾರೆ, ನೀ ಇಲ್ದೀರೆ ಮನೆಯೆಲ್ಲ ಬಣ ಬಣ ಅಂತದೆ"

ಗಂಗೆ ಕಣ್ಣೀರನ್ನು ಒರೆಸಿಕೊಳ್ಳುತ್ತಾ ಹೇಳಿದ್ದಳು.

ಸುಮಾ ಗಂಟಲ ನರವನ್ನುಬ್ಬಿಸಿ ಅಳುವನ್ನು ನುಂಗಿಕೊಂಡಿದ್ದಳು. ಇದನ್ನೆಲ್ಲ ನೋಡುತ್ತ ಅಂಗಳದಲ್ಲಿ ನಿಂತವರೆಲ್ಲರ ಕಣ್ಣಲ್ಲೂ ನೀರು. ಚೀಲದ ತಳದಲ್ಲಿ ಕೊನೆಯದಾಗಿ ಒಂದು ಪ್ಯಾಕೆಟ್ ಉಳಿದಿತ್ತು. ಅದರೊಳಗಿರುವ ಸೀರೆ, ಟವೆಲ್, ಪಂಜೆಗಳು ತನ್ನನ್ನೇ ಪ್ರಶ್ನಾರ್ಥಕವಾಗಿ ನೋಡುತ್ತಿರುವಂತೆ ಸುಮಾಳಿಗನಿಸಿತು. ನಾಗಪ್ಪ ಎಂಬ ಹೆಸರನ್ನಂಟಿಸಿಕೊಂಡ ಕವರಿನೊಳಗಡೆ ನೂರು ರೂಪಾಯಿ ಅಡಗಿ ಕುಳಿತ್ತಿತ್ತು. ಕೊನೆಯ ಬಾರಿಗೆ ಸುಮಾ ಸುತ್ತಲು ಕಣ್ಣಾಡಿಸಿದಳು. ಇಲ್ಲ, ನಾಗಪ್ಪ ಅಲ್ಲಿರಲಿಲ್ಲ. ಗಂಗೆಯ ಹತ್ತಿರ ಹೋಗಿ ಮೆಲುದನಿಯಲ್ಲಿ,

"ಗಂಗೆ ನಾ ಬಾ ಹೇಳಿದೆ ಅಂದಿ ನಾಗಪ್ಪಂಗೆ ಹೇಳಲಿಲ್ವ?"

"ಹೇಳಿದ್ನೆ ತಂಗಿ, ಮೊನ್ನೆ ಅವ್ನ ಮನಿಕೂಡೆ ಹೋಗಿ ಹೇಳಿ ಬಂದನೆ, ನೀ ಈಗ ಅದ್ನೆಲ್ಲ ತಲೀಗೆ ಹಚ್ಕಬೇಡ"

'ವಡಿದೀರು ಎಂತದೊ ಅಂದ್ರು ಅಂತ ತಂಗಿ ಮದಿಗೂ ಬರ್ಲಿಲ್ಲ ಆ ನಾಗಪ್ಪ ನೋಡು, ತಂಗಿಗೆ ಎಷ್ಟೆಲ್ಲಾ ಬೇಜಾರಾಗದೆ' ಗಂಗೆ ಮಾದಿಯ ಹತ್ತಿರ ಪಿಸುಗುಟ್ಟಿದ್ದು ಕೇಳಿದರೂ ಕೇಳದಂತೆ ಸುಮಾ ಮೆಟ್ಟಿಲು ಹತ್ತಿ ಒಳನಡೆದಳು.

ಇನ್ನು ತಡ ಮಾಡಬಾರದೆಂದು ಎಲ್ಲರ ಗಡಿಬಿಡಿ. ಮತ್ತೊಮ್ಮೆ ಬಾಸಿಂಗವನ್ನು ಕಟ್ಟಿಕೊಂಡು ಮದುಮಕ್ಕಳು ಮುನ್ನಡೆದರು. ಅವರ ಹಿಂದೆ ಹಿಂದೆ ಹೊರೆಯನ್ನು ಹೊತ್ತುಕೊಂಡು ನಾರಣ ನಡೆದ. ಸುಮಾ ಒಮ್ಮೆ ತಿರುಗಿ ನೋಡಿದಳು. ಯಾವಾಗಲೂ ತನ್ನ ಹೊರೆಯನ್ನು ಹೊರುವ ಮಾತನಾಡುತ್ತಿದ್ದ ನಾಗಪ್ಪನನ್ನು ಮತ್ತೊಮ್ಮೆ ನೆನಪಿಸಿಕೊಂಡಳು.

ಹತ್ತಿರದ ಸಂಬಂಧಿಕರೆಲ್ಲ ಹೆಣ್ಣೊಪ್ಪಿಸಿ, ಮನೆತುಂಬಿಸಿ ಬರಲು ಮದುಮಕ್ಕಳೊಂದಿಗೆ ಹೊರಟಿದ್ದರು. ಪ್ರಕಾಶನೊಂದಿಗೆ ಕಾರು ಹತ್ತಿ ಕುಳಿತ ಸುಮಾ ತಲೆ ಹೊರಹಾಕಿ ತನ್ನ ಮನೆಯನ್ನೊಮ್ಮೆ ಕಣ್ತುಂಬಿಸಿ ಕೊಂಡಳು. ನೆಂಟರಿಷ್ಟರೆಡೆಗೆ ಕೈ ಬೀಸಿದಳು. ಕಾರು ಚಲಿಸಿದಂತೆ ಗಂಗೆ, ಮಾದಿ, ಕನ್ನೆ, ವೆಂಕಟಿ ಎಲ್ಲರೂ ದೂರವಾಗುತ್ತಿದ್ದರು. ತೇವವಾದ ಕಂಗಳಿಗೆ ಹಿಂದೆ ಹಿಂದೆ ಮಡಿಯಾದ ಮಾಸಲು ಪಂಜೆಯೊಂದು ಕಂಡಂತಾಯಿತು.

*(ಮುಗಿಯಿತು)*

---

*(8ನೇ ಪುಟದಿಂದ)*

1904ರಲ್ಲಿಯೇ ಇಲ್ಲಿ ಕನ್ನಡ ಅಧ್ಯಯನಕ್ಕೆ ಅವಕಾಶ ದೊರೆಯಿತು. ಮುಂಬೈ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಉದ್ಘಾಟನೆಯನ್ನು ನೆರವೇರಿಸಿದವರು ಖ್ಯಾತ ಸಾಹಿತಿ ಶಿವರಾಮ ಕಾರಂತರು. ಕನ್ನಡ ವಿಭಾಗ ಸಂಶೋಧನ ಕೇಂದ್ರವಾಗಿ ಕೆಲಸ ಮಾಡಬೇಕು ಎಂಬ ಆಶಯವನ್ನು ಅವರು ವ್ಯಕ್ತಪಡಿಸಿದ್ದರು.

ಅದನ್ನು ವಿಭಾಗ ಪರಿಪಾಲಿಸಿಕೊಂಡು ಬಂದಿದೆ. ಕನ್ನಡ ವಿಭಾಗ ಈ ವರೆಗೆ 90ಕ್ಕೂ ಹೆಚ್ಚಿನ ಕೃತಿಗಳನ್ನು ಪ್ರಕಟಿಸಿದ್ದು ಅವುಗಳಲ್ಲಿ ಸಂಶೋಧನ ಕೃತಿಗಳದ್ದೇ ಸಿಂಹಪಾಲು. ಮುಂಬೈ ಭಾಗದ ಲೇಖಕರದು ಬಹುಭಾಷಿಕ ಸಂವೇದನೆ. ಹೀಗಾಗಿ ಈ ಭಾಗದ ಹೆಚ್ಚಿನ ಶೋಧ ಕೃತಿಗಳಲ್ಲಿ ತುಲನಾತ್ಮಕ, ಅಂತರ್ ಶಿಸ್ತಿನ ಅಧ್ಯಯನ ಎದ್ದು ಕಾಣುತ್ತದೆ ಎಂಬ ಅಂಶವನ್ನು ತಾಳೆಹಾಕಿ ನೋಡಿರುವುದು ಈ ಕೃತಿಯ ಇನ್ನೊಂದು ಹಿರಿಮೆ.

ಕಲಾ ಭಾಗ್ವತ್ ಅವರು ನಮ್ಮ ವಿಭಾಗದ ಹೆಮ್ಮೆಯ ವಿದ್ಯಾರ್ಥಿ. ಸದ್ಯ ಸಂಶೋಧನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಅವರು ಒಳ್ಳೆಯ ಸೃಜನಶೀಲ ಲೇಖಕರು, ಬಹುಮುಖ ಪ್ರತಿಭಾವಂತರು ಹಾಗೂ ಸಂಗೀತ ಕಲಾವಿದರು. ವ್ಯಾಪಕ ಓದು ಅಧ್ಯಯನದಲ್ಲೂ ಅವರದು ಎತ್ತಿದ ಕೈ. ಹೊರನಾಡಿನಲ್ಲಿರುವ ಕನ್ನಡ ವಿಭಾಗಗಳಲ್ಲಿ ಮುಂಬೈ ವಿಶ್ವವಿದ್ಯಾಲಯ ಕನ್ನಡ ವಿಭಾಗಕ್ಕೆ ವಿಶಿಷ್ಟವಾದ ಸ್ಥಾನಮಾನವಿದೆ ಎಂಬುದನ್ನು, ಕನ್ನಡ ವಿಭಾಗ ಮುಂಬೈ ಭಾಗದಲ್ಲಿ ಗೈದ ಕನ್ನಡ ಪರಿಚಾರಿಕೆಯನ್ನು ಒಂದು ಲೇಖನದಲ್ಲಿ ಕಲಾ ಅವರು ಸೊಗಸಾಗಿ ನಿರೂಪಿಸಿದ್ದಾರೆ. ಮುಂಬೈ ವಿಶ್ವವಿದ್ಯಾಲಯದಿಂದ ಎಂ.ಫಿಲ್ ಹಾಗೂ ಪಿಎಚ್.ಡಿ ಪದವಿ ಪಡೆದವರ ಯಾದಿ, ವಿಭಾಗ ಪ್ರಕಟಿಸಿದ ಪ್ರಮುಖ ಶೋಧ ಮಹಾಪ್ರಬಂಧಗಳು, ಕೃತಿಗಳು ಅವುಗಳ ಹೆಚ್ಚುಗಾರಿಕೆಯ ಕಿರು ವಿಶ್ಲೇಷಣೆ ಸಹ ಇಲ್ಲಿ ನೆಲೆ ಪಡೆದಿರುವುದು ಗಮನೀಯ ಅಂಶ. ಮುಂಬೈ ಭಾಗದಲ್ಲಿ ನಡೆದ ಕನ್ನಡ ಸಂಶೋಧನೆಯ ಕುರಿತು ಒಂದು ಮಹಾಪ್ರಬಂಧವನ್ನೇ ರಚಿಸಲು ಸಾಧ್ಯ ಎಂಬ ಸುಳಿವು ಈ ಕೃತಿಯಲ್ಲಿ ವ್ಯಕ್ತವಾಗಿದೆ.

ಈ ಮಹಾನಗರದಲ್ಲಿ ಕಳೆದ ಎರಡು ಶತಮಾನಗಳಲ್ಲಿ ನಡೆದ ಕನ್ನಡ ಪರ ಶೋಧ ಕಾರ್ಯ ಅದೆಷ್ಟು ವ್ಯಾಪಕವಾದದು ಎಂಬುದನ್ನು ಇಲ್ಲಿ ಲೇಖಕರು ಎತ್ತಿತೋರಿಸಿ ಅಚ್ಚರಿಪಡುವಂತೆ ಮಾಡಿದ್ದಾರೆ.

ಮುಂಬೈ ವಲಯದಲ್ಲಿ ರಚನೆಗೊಂಡ ಕದಂಬ ಕುಲ, ಛಂದೋ ವಿಕಾಸ, ಕಲ್ಯಾಣದ ಚಾಲುಕ್ಯರ ಅದೀನದ ಮಹಾಮಂಡಲೇಶ್ವರರು, ಕವಿರಾಜ ಮಾರ್ಗ ವಿವೇಕ, ಹೊಸಗನ್ನಡದ ಅರುಣೋದಯ, ತುಳುವರ ಮುಂಬೈ ವಲಸೆ, ಶ್ರೀ ನಾರಾಯಣ ಗುರು ವಿಜಯ, ಮುಂಬೈ ಕನ್ನಡ ರಂಗಭೂಮಿ, ಪೂರ್ವ ಕರ್ನಾಟಕದ ಪಾಳೆಯಗಾರರು, ಬೌದ್ಧಾಯನ, ಮಹಾರಾಷ್ಟ್ರ ಕರ್ನಾಟಕ ಆದಾನ ಪ್ರದಾನ ಮೊದಲಾದ ಕನ್ನಡ ಸಂಶೋಧನೆಯಲ್ಲಿ ಮೈಲುಗಲ್ಲು ನೆಟ್ಟ ಕೃತಿಗಳ ಸಾರಸತ್ವವನ್ನು ಈ ಕೃತಿಯಲ್ಲಿ ಚರ್ಚಿಸಿರುವುದು ಔಚಿತ್ಯಪೂರ್ಣ ಉಪಕ್ರಮ. ಕಲಾ ಭಾಗ್ವತ್ ಅವರ ಶ್ರಮ ಸಾರ್ಥಕ. ಈ ಕೃತಿಗಾಗಿ ಅವರಿಗೆ ಹಾರ್ದಿಕ ಅಭಿನಂದನೆಗಳು, ಶುಭಾಶಯಗಳು. ❍

---

*PAGE DONATED BY :* ***SMT. KALA BHAGWAT,*** **KHARGAR** ***IN MEMORY OF MOTHER LATE SMT. GOURI BHAT***

# HAVYAKA WELFARE TRUST, MUMBAI

# Annual General Body Meeting & Cultural Programmes

**DATE : 27-8-2023, Sunday • TIME : 09.30 a.m. onwards**

**Venue : Havyakara Sabhagraha,** Dipti Solitaire, 4th Floor, M. G. Road & L.B.S. Marg Junction, Opp. Old Post Office, Ghatkopar (W), Mumbai - 400 086.

**PROGRAMME SCHEDULE :**

| | | |
|---|---|---|
| Registration and Breakfast | : | 09.30 a.m. to 10.30 a.m. |
| Dance Floor & Skit Programme | : | 10.30 a.m. to 01-30 p.m. |
| Lunch Break | : | 01.30 p.m. to 2.30 p.m. |
| Annual General Body Meeting | : | 02.30 p.m. onwards |

**Dance Floor - Open for all.**
**Solo / Group Dance,**
**Classical / Free Style Dance,**
**Time limit - maximum 8 minutes for each Participant / group**
**Skit - Light comedy skit with a message to the society is preferable.**

**Participate with a group of minimum 3 members, maximum no limit**
**Time limit - 10 to 12 minutes**

**Please enroll your name before 20th August, 2023.**

***CONTACT :***

| | | |
|---|---|---|
| **Amita Bhagwat** | - | **9819324284** |
| **Shashikala Hegde** | - | **9869015917** |
| **Vishnu Bhagwat** | - | **9819798245** |
| **G. V. Hegde** | - | **9167434626** |

**Shri Shivkumar Bhagwat**
President HWT

**Shri Narayan Akadas**
Secretary HWT

*PAGE DONATED BY : **SHRI CHIDANANDA BHAGWAT IN MEMORY OF HIS FATHER LATE KRISHNA T. BHAGWAT***

# Thinking of Risk before Return

✍ **Vinod N. Bhat**

Anand was reading a newspaper on a lazy Sunday morning when he saw a chart showing the returns from different asset classes over various 1 yr, 3 yr, 5 yr, 10 yr, and 15 yr time periods.

'Who invests for such long time periods?' he wondered to himself. 'For me 1 yr is long term!'

And as usual, his eyes gravitated to the returns over the past one year.

The chart showed that over the past one year, Equities i.e., stock markets had given around 8% return, whereas Fixed Income i.e. Debt had given returns of around 7%. Gold had given a return of just 5%. And Real estate had hardly given any returns at around 3%.

He felt concerned seeing the data. The returns seemed low. He called his friend Siddharth who was an Investment Adviser and asked if they could meet at a nearby coffee shop. Siddharth readily agreed.

'Even my bank FDs are giving me 7% interest. What's the point of wasting my time worrying about where to invest my money. Shouldn't I just keep it in bank FDs?' Anand complained to him.

'Hold on Anand! Not so fast,' Siddharth replied. 'Did you even bother to look at the rest of the data?'

'No. As a matter of fact, I didn't.'

'Why don't we look at a longer timer period? Here, let's check out the 5 yr returns. As an investor, you should at least keep a 5-7 year horizon at a minimum.'

'And why is that?'

'Because a business cycle typically lasts for 5-7 years and you should stay invested at least across one business cycle to get a normalized return.'

'OK. Let's look at the data.'

'Over the past five years, Equities have given around 12.5% annual returns on average, whereas Debt has given returns of around 6.5%. Gold has given around 10% returns. However, Real estate had hardly given any returns at around 3%.'

'OK. That's great. I should just invest in the stock market then as it has given the highest return.'

'That would be the first thought that comes to mind but that's not the right way to look at it. As investors, we need to look at not just returns but risk-adjusted returns.'

'What do you mean?'

'Here, let me show you some more data,' Siddharth said as he opened his laptop and showed him an Excel sheet with data showing annual returns of different asset classes.



'As you can see, different asset classes do well in different years. Last year, all asset classes gave only moderate returns. But the year before that, Indian Equities gave the best returns whereas Gold outperformed earlier.'

'That's right. And I can see that International Equities and Debt gave the best returns in the prior years. I didn't know that returns differ so much every year.'

'And that's where the risk comes in. Whether it's a 1-yr or 5-yrs, it's difficult to say which asset class will do well and how much the variation in returns can be. For example, if you look at the data, can you see which asset class has the highest variation in returns over the years?'

'Hmm, clearly, it's Equities. Returns can be +25% one year and -20% the next.'

'You are right. In fact, the variation can even be higher. And that's why we say that Equities is the most volatile or risky asset class. And at the opposite extreme, we have bank FDs where the volatility or risk is the lowest.'

'And the riskiness of other asset classes falls somewhere in between?'

'Correct. Debt, Gold, and Real Estate fall between FDs at one end and Equities at the other.'

'So, when we see the returns data, in parallel, we should always see the volatility in returns too which gives us an idea of the riskiness of an asset class?'

'Exactly. In fact, we should keep in mind that risk comes before returns. Else, we may end up with losses in our investments.'

'So, just because Equities has given the highest returns in the past 5-yr period, I shouldn't just go all in on Equities because it could end up giving negative returns.'

'Now, you got it.'

'So, what is the solution then. What should I do?' Anand asked after some thought.

'That is the right question. The solution is called Asset Allocation,' Siddharth replied with a smile.

'OK. So, tell me more about it.'

*(to be continued)*

[Vinod Bhat is the author of the book **'The Financial Independence Marathon'** which has been recently published by Penguin India. Readers can refer to the book for many such golden nuggets. The book is available on Amazon.in at : https://www.amazon.in/Financial-Independence-Marathon-Unlock-Power/dp/0143459988]

# ಖಿನ್ನತೆ

✍ ಶಾರದ ಆಂಚನ್

*(ಕಳೆದ ಸಂಚಿಕೆಯಿಂದ)*

ಮೆದುಳಿನ ರಸಾಯನ ಶಾಸ್ತ್ರದ ಪ್ರಕಾರ ಮನಃಸ್ಥಿತಿ, ಆಲೋಚನೆಗಳನ್ನು ನಿರ್ವಹಿಸುವ ಮೆದುಳಿನ ಭಾಗಗಳಲ್ಲಿ ರಾಸಾಯನಿಕ ಅಸಮತೋಲನವಾಗಿ ಇದು ಸಾಮಾನ್ಯ, ಆದರೆ ಗಂಭೀರ ಮನಸ್ಥಿತಿಯ ಅಸ್ವಸ್ಥತೆಯಾಗಿ ಕಾಡುತ್ತದೆ. ತಿನ್ನುವುದು, ಉಣ್ಣುವುದು, ನಿದ್ರಿಸುವುದು ಅಥವಾ ಕೆಲಸ ಮಾಡುವಂತಹ ದೈನಂದಿನ ಚಟುವಟಿಕೆಗಳ ಬಗ್ಗೆಯೇ ನಾವು ಹೇಗೆ ಯೋಚಿಸುತ್ತೇವೆ ಮತ್ತು ನಿರ್ಣಯಿಸುತ್ತೇವೆ ಎಂಬುದರ ಮೇಲೆ ಪರಿಣಾಮ ಬೀರುವ ತೀವ್ರವಾದ ರೋಗಲಕ್ಷಣಗಳನ್ನು ಇದು ಉಂಟು ಮಾಡುತ್ತದೆ. ಖಿನ್ನತೆಯನ್ನು ಪತ್ತೆ ಹಚ್ಚಲು ಕನಿಷ್ಠ ಎರಡು ವಾರಗಳ ಸಮಯ ಬೇಕು.

ಖಿನ್ನತೆಯ ಕೆಲವು ರೂಪಗಳು ಸ್ವಲ್ಪ ಭಿನ್ನವಾಗಿರುತ್ತವೆ ಅಥವಾ ಅವು ವಿಶಿಷ್ಟ ಸಂದರ್ಭಗಳಲ್ಲಿ ಬೆಳೆಯಬಹುದು. ಉದಾಹರಣೆಗೆ - ಹೆರಿಗೆಯ ನಂತರ ಅನೇಕ ಮಹಿಳೆಯರು ಖಿನ್ನತೆಯನ್ನು ಅನುಭವಿಸುತ್ತಾರೆ. ಪ್ರಸವಾನಂತರದ ಖಿನ್ನತೆಯೊಂದಿಗೆ ಉಂಟಾಗುವ ತೀವ್ರ ದುಃಖ, ಆತಂಕ ಮತ್ತು ಬಳಲಿಕೆಯ ಭಾವನೆಗಳು ಈ ನವ ತಾಯಂದಿರಿಗೆ ತಮ್ಮ ಅಥವಾ ತಮ್ಮ ಶಿಶುಗಳಿಗೆ ದೈನಂದಿನ ಆರೈಕೆ ಚಟುವಟಿಕೆಗಳನ್ನು ಪೂರ್ಣಗೊಳಿಸಲು ಕಷ್ಟವಾಗಬಹುದು. ನಿರಂತರ ಖಿನ್ನತೆಯ ಅಸ್ವಸ್ಥತೆ (ಡಿಸ್ತೀಮಿಯಾ ಎಂದೂ ಕರೆಯುತ್ತಾರೆ).

ಖಿನ್ನತೆಯು ಯಾವುದೇ ವಯಸ್ಸಿನಲ್ಲಿ ಸಂಭವಿಸಬಹುದು. ಆದರೆ ಸಾಮಾನ್ಯವಾಗಿ ಪ್ರೌಢಾವಸ್ಥೆಯಲ್ಲಿ ಪ್ರಾರಂಭವಾಗುತ್ತದೆ. ಖಿನ್ನತೆಯು ಈಗ ಮಕ್ಕಳು ಮತ್ತು ಹದಿಹರೆಯದವರಲ್ಲಿ ಕೂಡಾ ಕಂಡುಬರುತ್ತದೆ ಎಂದು ಗುರುತಿಸಲಾಗಿದೆ. ವಿಶೇಷವಾಗಿ ಮಿಡ್ಲೈಫ್ ಅಥವಾ ಹಿರಿಯ ವಯಸ್ಕರಲ್ಲಿ, ಮಧುಮೇಹ, ಕ್ಯಾನ್ಸರ್‌ನಂತಹ ಇತರ ಗಂಭೀರ ವೈದ್ಯಕೀಯ ಕಾಯಿಲೆಗಳೊಂದಿಗೆ ಸಹ ಸಂಭವಿಸಬಹುದು.

ಖಿನ್ನತೆಗೆ ಹಲವು ರೀತಿಯ ಮಾನಸಿಕ ಉಪಚಾರ, ಥೆರಪಿಗಳು ಹಾಗೂ ತೀವ್ರ ಮಾನಸಿಕ ಖಿನ್ನತೆಗೆ ಹಲವು ರೀತಿಯ ವೈದ್ಯೋಪಚಾರಗಳೂ ಇವೆ. ಕೆಳಗಿನವುಗಳನ್ನು ಒಳಗೊಂಡಂತೆ ವೈದ್ಯಕೀಯ ಚಿಕಿತ್ಸೆಗಳು ಮತ್ತು ಜೀವನಶೈಲಿ ಚಿಕಿತ್ಸೆಗಳನ್ನು ಸಂಯೋಜಿಸುವುದು ಈಗ ಸಾಮಾನ್ಯವಾಗಿದೆ.

ಖಿನ್ನತೆಗೆ ಚಿಕಿತ್ಸೆ ನೀಡಲು ಬಳಸಲಾಗುವ ಪ್ರತಿಯೊಂದು ರೀತಿಯ ಔಷಧಿಯು ಪ್ರಯೋಜನಗಳ ಜೊತೆಗೆ ಕೆಲವು ಅಪಾಯಗಳನ್ನು ಕೂಡಾ ಹೊಂದಿದೆ.

ಹಾಗೆಯೇ ಸೈಕೋಥೆರಫಿ, ಚಾಕ್ ಥೆರಫಿ, ಕಾಗ್ನಿಟಿವ್ ಬಿಹೇವಿಯರಲ್ ಥೆರಪಿ (CBT),

ಡಯಲೆಕ್ಟಿಕಲ್ ಬಿಹೇವಿಯರ್ ಥೆರಪಿ (DBT), ಮುಂತಾದ ಥೆರಪಿಗಳ ಮೂಲಕವೂ ಖಿನ್ನತೆಯನ್ನು ದೂರ ಮಾಡುವ ಉಪಚಾರ ನೀಡಲಾಗುತ್ತದೆ.



ಖಿನ್ನತೆ ಮತ್ತು ಇತರ ಮನೋವೈದ್ಯಕೀಯ ಅಸ್ವಸ್ಥತೆಗಳಿರುವ ಜನರಲ್ಲಿ ರೋಗಲಕ್ಷಣಗಳನ್ನು ಸುಧಾರಿಸುವಲ್ಲಿ ಪರಿಣಾಮಕಾರಿ ಚಿಕಿತ್ಸೆಯಾಗಿ ಸೈಕೋಥೆರಪಿಯನ್ನು ವಿಶ್ವಾಸಾರ್ಹ ಮೂಲವೆಂದು ತೋರಿಸಲಾಗಿದೆ.

ಸೈಕೋಥೆರಪಿಯನ್ನು ಹೆಚ್ಚಾಗಿ ಔಷಧೀಯ ಚಿಕಿತ್ಸೆಯ ಜೊತೆಗೆ ಬಳಸಲಾಗುತ್ತದೆ. ಹಲವಾರು ರೀತಿಯ ಮಾನಸಿಕ ಚಿಕಿತ್ಸೆಗಳಿವೆ ಮತ್ತು ಕೆಲವರು ಒಂದು ಪ್ರಕಾರಕ್ಕೆ ಇನ್ನೊಂದಕ್ಕಿಂತ ಉತ್ತಮವಾಗಿ ಪ್ರತಿಕ್ರಿಯಿಸುತ್ತಾರೆ.

ಕೊನೆಯದಾಗಿ ಖಿನ್ನತೆಯನ್ನು ದೂರ ಮಾಡಲು, ಸದಾ ಒತ್ತಡದಲ್ಲಿರುವ ಮನಸ್ಸನ್ನು ಹತೋಟಿಗೆ ತರಲು ಧ್ಯಾನ ಬಹಳ ಪರಿಣಾಮಕಾರಿಯಾಗಿದೆ ಎಂದು ಅಧ್ಯಾತ್ಮದಲ್ಲಿ ವಿವರಿಸಲಾಗಿದೆ. ನಿರ್ದಿಷ್ಟ ಸಮಯದಲ್ಲಿ ನಿರ್ದಿಷ್ಟ ಸ್ಥಳದಲ್ಲಿ ಏಕಚಿತ್ತವಾಗಿ ಭಗವಂತನ ಧ್ಯಾನದಲ್ಲಿ ತೊಡಗುವುದರಿಂದ ಮನೋ ನಿಗ್ರಹ ಸಾಧ್ಯವಾಗುತ್ತದೆ. ಇದರಿಂದ ಧ್ಯಾನದ ಹಿಡಿತ ಸಿಗುವುದರೊಂದಿಗೆ ಮಾನಸಿಕ ನೆಮ್ಮದಿಯೂ ಸಿಗಬಲ್ಲುದು. ❍

UIL

UGRU INDUSTRIES

*With Best Compliments from*

**UGRU INDUSTRIES**

**Manufacturers of Speciality food products**

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in

***ADVT.***

*PAGE DONATED BY :* ***SMT. GANGA P. BHAGWAT PRABHADEVI IN MEMORY OF LATE SHRI P. R. BHAGWAT***

# ಮಾಸ ಭವಿಷ್ಯ

✍ ಶ್ರೀಪತಿ ಭಟ್

**ಮೇಷ :** ಈ ಮಾಸದಲ್ಲಿ ಮಕ್ಕಳ ಮದುವೆಯಂತಹ ವಿಚಾರವನ್ನು ತಿಳಿಮನಸ್ಸಿನಿಂದ ಆಲೋಚಿಸಿ. ಸಮಸ್ಯೆಗಳಿಗೆ ಉತ್ತರ ಸಿಗುವುದು. ಅನಿರೀಕ್ಷಿತ ಪ್ರಯಾಣ ಬದುಕಿನ ಹೊಸ ದಾರಿಗೆ ಕಾರಣವಾಗಲಿದೆ. ಧನವ್ಯಯದಲ್ಲಿ ಗಮನವಿರಲಿ. ಬೆಂಕಿಯಿಂದ ಅಥವಾ ಸುಡುವ ಪದಾರ್ಥದಿಂದ ದೂರವಿರುವುದು ಉತ್ತಮ. ಪಿತ್ತಕೋಶಕ್ಕೆ ಸಂಬಂಧಿಸಿದಂತೆ ಅನಾರೋಗ್ಯಗಳು ಎದುರಾಗಬಹುದು. ತಾಯಿ ದುರ್ಗಾಪರಮೇಶ್ವರಿಯ ಆರಾಧನೆಯಿಂದ ಶುಭಪ್ರಾಪ್ತಿ.

**ವೃಷಭ :** ಈ ಮಾಸದಲ್ಲಿ ಯೋಜನೆಗಳು ಸ್ಥಗಿತಗೊಂಡಂತೆ ಆಗಬಹುದು. ಕೃಷಿ ಕಾರ್ಯಗಳು ಚುರುಕುಗೊಂಡು ರೈತಾಪಿ ವರ್ಗದವರಲ್ಲಿ ಸಂತಸ ಮೂಡಲಿದೆ. ಸಡಗರದಲ್ಲಿ ವಸ್ತ್ರಾಭರಣ ಖರೀದಿಗೆ ಹಣ ವಿನಿಯೋಗ ಮಾಡುವಿರಿ. ಆರನೆಯ ಇಂದ್ರಿಯದ ಸೂಚನೆಯ ಸಹಾಯ ಉಪಯುಕ್ತ ವಾಗಲಿದೆ. ವ್ಯಾಪಾರದಲ್ಲಿ ಅತೀವ ಆಸಕ್ತಿ ಮೂಡುತ್ತದೆ. ಅಧಿಕ ಲಾಭಾಂಶ ಹೊಂದುವಿರಿ. ಅಪೇಕ್ಷಿಗಳಿಗೆ ಸಂತಾನ ಭಾಗ್ಯ ದೊರೆಯುವುದು.

**ಮಿಥುನ :** ಈ ಮಾಸದಲ್ಲಿ ನಡವಳಿಕೆಯು ಮನೆಯವರಲ್ಲಿ ಸಂತಸವನ್ನು ಮೂಡಿಸುತ್ತದೆ. ಹಾಲು, ಮೊಸರು, ತುಪ್ಪದಂತಹ ಗೋ ಉತ್ಪನ್ನ ವಸ್ತುಗಳ ಮಾರಾಟಗಾರರಿಗೆ ಲಾಭವಾಗಲಿದೆ. ಆಧ್ಯಾತ್ಮಿಕ ವಿಚಾರಗಳತ್ತ ಗಮನ ಹರಿಸುವಿರಿ. ತಾಯಿಯ ದೇಹದಲ್ಲಿ ವಾಯು ಪ್ರಕೋಪದಿಂದಾಗಿ ಹಲವು ಸಮಸ್ಯೆಗಳು ಕಾಡಬಹುದು. ಅವರ ಆರೋಗ್ಯ ಸುಧಾರಿಸಲು ಧಾರ್ಮಿಕ ಕಾರ್ಯ ಮಾಡಿ. ಪ್ರೇಮಿಗಳ ಪಾಲಿಗೆ ಮಹತ್ತರ ಬೆಳವಣಿಗೆ ಕಂಡುಬರಲಿದೆ.

**ಕರ್ಕಾಟಕ :** ಈ ಮಾಸದಲ್ಲಿ ಆಟಿಕೆಗಳ ಮಾರಾಟದವರಿಗೆ ಉತ್ತಮ ಮಾರಾಟ ಹಾಗೂ ಲಾಭ ಸಿದ್ಧಿಸುತ್ತದೆ. ಮದುವೆ ಕೆಲಸಗಳಿಂದಾಗಿ ಓಡಾಟ ಹೆಚ್ಚುವುದು. ಕಾರ್ಮಿಕರ ಬೇಜವಾಬ್ದಾರಿತನದಿಂದಾಗಿ ಲಾಭಕ್ಕೆ ತೊಂದರೆ ಉಂಟಾಗಬಹುದು. ಸೋಮಾರಿತನ, ಅತಿಯಾದ ನಿದ್ದೆ ಕಾರ್ಯಕ್ಕೆ ಭಂಗವನ್ನು ತರಲಿದೆ. ಪರಿಸರದ ಸನ್ನಿವೇಶವೂ ಇದಕ್ಕೆ ಪೂರಕವಾಗಿರುವುದು. ರಕ್ಷಣಾ ವೃತ್ತಿಗೆ ಸಂಬಂಧಿಸಿದವರು ಎಚ್ಚರದಿಂದ ಕಾರ್ಯ ನಿರ್ವಹಿಸಿ.

**ಸಿಂಹ :** ಈ ಮಾಸದಲ್ಲಿ ಆತಂಕ ತುಂಬಿದ ಕೆಲಸ ಕಾರ್ಯದಲ್ಲಿರುವವರ ಮನೆಯಲ್ಲಿ ನೆಮ್ಮದಿ ತುಂಬುವುದು. ಸುಂದರ ಸಂಜೆ ನಿಮ್ಮದಾಗುತ್ತದೆ. ವ್ಯಾಪಾರ-ವ್ಯವಹಾರದಲ್ಲಿ ಮತ್ತು ಪ್ರಯಾಣ ನಡೆಸುವಾಗ ನಯವಂಚಕರ ಬಗ್ಗೆ ಎಚ್ಚರ ವಹಿಸಿ. ಹಿಂಜರಿಕೆಯ ಸ್ವಭಾವದಿಂದ ವೃತ್ತಿಯನ್ನು ಸಂಪಾದಿಸಲು ಕಷ್ಟವಾಗುತ್ತದೆ. ದೇವತಾನುಗ್ರಹದಿಂದ ಆರ್ಥಿಕ ಖರ್ಚು ವೆಚ್ಚಗಳ ಸಮತೋಲನ. ಕುಟುಂಬದಲ್ಲೂ ತೃಪ್ತಿ. ಆರೋಗ್ಯದಿಂದ ಮಾನಸಿಕ ಶಾಂತಿ ಕಾಣುವಿರಿ.

**ಕನ್ಯಾ :** ಈ ಮಾಸದಲ್ಲಿ ಬದುಕಿನಲ್ಲಿ ಸಕಾರಾತ್ಮಕವಾಗಿ ಯೋಚಿಸುವುದನ್ನು ಅಭ್ಯಾಸ ಮಾಡಿ. ಇಂದಿನ ದಿನದ ಕೆಲಸ, ಇಂದಿನ ದಿನವೇ ಮುಗಿಸುವುದನ್ನು ಕಾರ್ಯರೂಪಕ್ಕೆ ತಂದುಕೊಳ್ಳಿರಿ. ಶನೈಶ್ಚರ ದರ್ಶನ ಮಾಡಿ ಕೃಪೆಗೆ ಪಾತ್ರರಾಗಿ. ವಾಹನಗಳ ಬಿಡಿ ಭಾಗಗಳ ಮಾರಾಟಗಾರರಿಗೆ ಮತ್ತು ಕಥೆ ಕವನದ ಬರಹಗಾರರಿಗೆ ಅವಕಾಶ ಹೆಚ್ಚಲಿದೆ. ಪತ್ರಿಕಾರಂಗದವರಿಗೆ ಶುಭ ದಿನ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಹೆಚ್ಚು ಆಸಕ್ತಿ ಮೂಡಲಿದೆ.



**ತುಲಾ :** ಈ ಮಾಸದಲ್ಲಿ ಕುಟುಂಬದವರ ಮಾತುಗಳಿಗೆ ಬೆಲೆ ಕೊಡುವುದು ಮತ್ತು ಎಲ್ಲರಲ್ಲೂ ಸಹನೆಯಿಂದ ವರ್ತಿಸುವುದನ್ನು ರೂಢಿಸಿ ಕೊಳ್ಳುವುದು ಉತ್ತಮ. ಆರೋಗ್ಯದಲ್ಲಿ ಸ್ವಲ್ಪ ಮಟ್ಟಿಗೆ ಏರುಪೇರಾಗಲಿದೆ. ನೀಲಿ ಬಣ್ಣ ಶುಭ ತರಲಿದೆ. ಕೆಲಸ ಕಾರ್ಯಗಳು ಕೈಗೂಡಲೆಂದು ದೇವರಲ್ಲಿ ಹರಕೆ ಹೊತ್ತಿರುವ ವಿಚಾರವನ್ನು ತೀರಿಸುವ ಬಗ್ಗೆ ಹೆಚ್ಚಿನ ಪ್ರಯತ್ನ ಇರಲಿ. ಯುವ ಕೃಷಿಕರು ಕೃಷಿ ಕ್ಷೇತ್ರದಲ್ಲಿ ಉತ್ತಮ ಸಾಧನೆ ತೋರುವಿರಿ.

**ವೃಶ್ಚಿಕ :** ಈ ಮಾಸದಲ್ಲಿ ಸಾಮಾಜಿಕ ಕ್ಷೇತ್ರದಲ್ಲಿ ಮನ್ನಣೆ ಹೆಚ್ಚಲಿದೆ. ದೈವಾನುಗ್ರಹದಿಂದ ಸಾಂಸಾರಿಕವಾಗಿ ಮತ್ತು ಆರ್ಥಿಕವಾಗಿಯೂ ಇಷ್ಟಾರ್ಥ ಸಿದ್ಧಿಸುವುದು. ಬಯಸಿದ ಕೆಲಸಗಳನ್ನು ತ್ವರಿತವಾಗಿ ಮಾಡಿ ಮುಗಿಸುತ್ತೀರಿ. ಕಾರ್ಯಕ್ಷೇತ್ರದಲ್ಲಿ ಹೆಚ್ಚಿನ ಒತ್ತಡ ತೋರಿ ಬಂದರೂ ಅಭಿವೃದ್ಧಿದಾಯಕವಾದ ಬೆಳವಣಿಗೆ ಹರ್ಷವನ್ನು ತರುವುದು. ಇಂದಿನಿಂದ ಮತ್ತೊಬ್ಬರ ಅವಲಂಬನೆ ಬೇಡವೆನಿಸುತ್ತದೆ. ದ್ವಿಚಕ್ರ ವಾಹನ ಕೊಳ್ಳುವ ಯೋಗವಿದೆ.

**ಧನು :** ಈ ಮಾಸದಲ್ಲಿ ಸಹೋದ್ಯೋಗಿಗಳ ಸಹಕಾರದಿಂದ ಕೆಲಸ ಕಾರ್ಯಗಳಲ್ಲಿ ಜಯ ದೊರೆತು ಮನಸ್ಸು ಉಲ್ಲಾಸದಿಂದ ಇರುವುದು. ದಾಖಲೆ ಅಥವಾ ಒಪ್ಪಂದಗಳಿಗೆ ಎಚ್ಚರ ವಹಿಸಿ ಸಹಿ ಮಾಡಿರಿ. ಈ ವಿಚಾರದಲ್ಲಿ ಕಳವಳ ಬೇಡ. ವ್ಯಾಪಾರ ವ್ಯವಹಾರದಲ್ಲಿ ಲಾಭ, ನಷ್ಟ ಏನೇ ಆದರೂ ಅದನ್ನು ಮುಕ್ತವಾಗಿ ಸ್ವೀಕರಿಸುವ ಭಾವನೆ ಇರಲಿ. ಕಬ್ಬಿಣ ಮತ್ತು ಪ್ಲಾಸ್ಟಿಕ್ ವ್ಯಾಪಾರಗಳಿಂದ ಲಾಭವಿದೆ. ವಿದ್ಯಾರ್ಥಿಗಳಿಗೆ ಓದಿನಲ್ಲಿ ಪ್ರಗತಿ ಕಾಣುವುದು.

**ಮಕರ :** ಈ ಮಾಸದಲ್ಲಿ ತಾಂತ್ರಿಕ ಪರಿಣತರಿಗೆ ಉನ್ನತ ಸಂಸ್ಥೆಗಳಲ್ಲಿ ಉದ್ಯೋಗ ಸಿಗಲಿದೆ. ತಾಂತ್ರಿಕ ವಿದ್ಯಾಭ್ಯಾಸದಲ್ಲಿ ಉನ್ನತ ಯಶಸ್ಸು ದೊರೆತು ಆನಂದವಾಗುತ್ತದೆ. ವೈಯಕ್ತಿಕ ಜೀವನದ ಸಮಸ್ಯೆ ಬಗೆಹರಿದು ಮನಸ್ಸಿಗೆ ನೆಮ್ಮದಿ ಮೂಡಲಿದೆ. ಕೆಲಸದಲ್ಲಿ ಹೆಚ್ಚಿನ ಸ್ವಾತಂತ್ರ್ಯ ಸಿಕ್ಕಿ ಉತ್ತಮ ಚಟುವಟಿಕೆಗಳು ಇರುವುದು. ನಿಮ್ಮ ಅಭಿಪ್ರಾಯಗಳಿಗೆ ಮನ್ನಣೆ ಇರುವುದು. ನೂತನ ವ್ಯಾಪಾರಿಗಳು ವ್ಯಾಪಾರದಲ್ಲಿ ಪ್ರಬುದ್ಧತೆಯಿಂದ ವ್ಯವಹರಿಸಿ.

**ಕುಂಭ :** ಈ ಮಾಸದಲ್ಲಿ ಮುಖಂಡತ್ವದ ಸಾಮಾಜಿಕ ಕಾರ್ಯಕ್ಕೆ ಗ್ರಾಮಸ್ಥರಿಂದ ನಿರೀಕ್ಷೆಗೂ ಮೀರಿ ಸಹಾಯ ಸೌಹಾರ್ದಗಳು ದೊರೆಯುವುದು. ಶೇರು ವ್ಯವಹಾರಗಳಿಂದ ಹೆಚ್ಚಿನ ಲಾಭಾಂಶವನ್ನು ಪಡೆದುಕೊಳ್ಳುವಿರಿ. ಕೆಲಸ ಮಾಡುತ್ತಿರುವ ಜಾಗದಲ್ಲಿ ತೊಂದರೆ ಕಾಣಿಸಿಕೊಳ್ಳಲಿದೆ. ಕೂಡಲೇ ಬಗೆಹರಿಸಿಕೊಳ್ಳಿರಿ. ಮಹತ್ವದ್ದೆನಿಸಿದ ಕೆಲಸಗಳ ಬಗ್ಗೆ ಸುದೀರ್ಘ ಸಮಾಲೋಚನೆ ನಡೆಸಬೇಕಾಗುವುದು.

**ಮೀನ :** ಈ ಮಾಸದಲ್ಲಿ ಕಲಾಸೇವೆ ಗುರುತಿಸಿ ಪ್ರಶಂಸೆ ಹಾಗೂ ಸನ್ಮಾನ ದೊರೆಯಲಿದೆ. ಕೆಲವರ ಸಂಬಂಧವು ಕೊನೆಗೊಳ್ಳುವಂಥ ಪರಿಸ್ಥಿತಿ ಎದುರಾಗಬಹುದು. ವಾಹನ ಬಿಡಿಭಾಗಗಳ ಮಾರಾಟಗಾರರಿಗೆ ಆದಾಯದ ದಿನ, ಆಡುವ ಸುಳ್ಳು ಮಾತಿನ ಫಲವನ್ನು ತಕ್ಷಣದಲ್ಲಿ ಅನುಭವಿಸು ವಂತಾಗುವುದು. ಆರೋಗ್ಯಕ್ಕಾಗಿ ವ್ಯಾಯಾಮ ಮಾಡುವುದನ್ನು ಅಭ್ಯಾಸ ಮಾಡಿ. ದವಸ ಧಾನ್ಯಗಳ ದಾಸ್ತಾನಿಗಾಗಿ ಬಂಡವಾಳ ಹೂಡುವುದು ಸರಿಯಲ್ಲ.

PAGE DONATED BY : ***SHRI A. K. BHAT, CHITRIGI & FAMILY***

# ಸಂಕ್ಷಿಪ್ತ ಸುದ್ದಿಗಳು

## ಮುಂಬೈ ವಿಶ್ವವಿದ್ಯಾಲಯ, ಕನ್ನಡ ವಿಭಾಗ : ಸಾಹಿತ್ಯ ಸಂವಾದ, ವಿಶೇಷ ಉಪನ್ಯಾಸ ಕಾರ್ಯಕ್ರಮ; ಕಲಾ ಭಾಗ್ವತ್ ಮತ್ತು ಅನಿತಾ ಪೂಜಾರಿ ತಾಕೋಡೆ ಇವರಿಗೆ 'ಶೋಧ ಸಿರಿ' ಪ್ರಶಸ್ತಿ




'ಯಾವುದೇ ಪದಬಳಕೆಯನ್ನು ವಿವಿಧ ಸನ್ನಿವೇಶಗಳಲ್ಲಿ, ಬೇರೆ ಬೇರೆ ಸಂದರ್ಭಗಳಲ್ಲಿ ಮಾಡುವಾಗ ಯೋಚಿಸಿ ಮಾಡಬೇಕು. ಕತೆ, ಕಾದಂಬರಿ, ಪ್ರಬಂಧ ಅಥವಾ ಇತರ ಯಾವುದೇ ಲೇಖನಗಳನ್ನು ಬರೆದಾಗ ಅದನ್ನು ಪುನಃ ಪುನಃ ಪರಿಷ್ಕರಿಸಬೇಕಾದ ಅವಶ್ಯಕತೆ ಇರುತ್ತದೆ. ಅದಕ್ಕಾಗಿ ನಾವು ಭಾಷೆಯ ಸರಿಯಾದ ಅಧ್ಯಯನವನ್ನು ಮಾಡಿರಬೇಕು. ಬರಹಗಾರರು ಕಲ್ಪನಾಶೀಲರಾಗಿರಬೇಕು. ತತ್ವಶಾಸ್ತ್ರವನ್ನು ತಿಳಿದಿರಬೇಕು. ಕಥೆಯ ಮೂಲಕ ತತ್ವಶಾಸ್ತ್ರದ ಬಗ್ಗೆ ಹೇಳಲು, ತಿಳಿಯಲು ಸಾಧ್ಯ. ವೇದೋಪನಿಷತ್ತುಗಳ ಕಾಲದಿಂದಲೂ ತತ್ವಜ್ಞಾನವನ್ನು ಋಷಿಮುನಿಗಳು ಕಥೆಗಳ ಮೂಲಕವೇ ಹೇಳುತ್ತಾ ಬಂದರು. ಕಥೆ ಇಲ್ಲದೆ ಹೋದರೆ ಗಂಭೀರ ತತ್ವಗಳನ್ನು ಹೇಳುವುದಕ್ಕೆ ಆಗಲಾರದು. ಕಾದಂಬರಿಗಳಲ್ಲಿ ವಾಸ್ತವಾಂಶಗಳ ಜೊತೆಗೆ ಕಲ್ಪನಾ ಶಕ್ತಿಯೂ ಮುಖ್ಯ. ಆಳವಾದ ಚಿಂತನೆ, ಕಲ್ಪನೆ ಇವೆರಡೂ ಅಧ್ಯಯನದಿಂದ ಮಾತ್ರ ಸಾಧ್ಯ. ಕಾದಂಬರಿಗೆ ತೂಕ ಬರಬೇಕಾದರೆ ಅದಕ್ಕೆ ಆಳವಾದ ಚಿಂತನೆ ಬೇಕು' ಎಂದು ಖ್ಯಾತ ಕಾದಂಬರಿಕಾರ, ಪದ್ಮಭೂಷಣ ಡಾ. ಎಸ್. ಎಲ್. ಭೈರಪ್ಪ ಅವರು ಅಭಿಪ್ರಾಯಪಟ್ಟರು. ಅವರು ಜು. 21ರಂದು ಮುಂಬೈ ವಿಶ್ವವಿದ್ಯಾನಿಲಯ, ಕಲೀನಾ ಕ್ಯಾಂಪಸ್‌ನ ಜೆ. ಪಿ. ನಾಯಕ್ ಸಭಾಭವನದಲ್ಲಿ ಕನ್ನಡ ವಿಭಾಗದ ಸ್ನಾತಕೋತ್ತರ ಮತ್ತು ಸಂಶೋಧನ ವಿದ್ಯಾರ್ಥಿಗಳೊಂದಿಗೆ ವಿಶೇಷ ಸಂವಾದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡುತ್ತಿದ್ದರು. ಇದೇ ಸಂದರ್ಭದಲ್ಲಿ ಡಾ. ಜಿ. ಎನ್. ಉಪಾಧ್ಯ ಹಾಗೂ ಡಾ. ಉಮಾ ರಾಮರಾವ್ ಅವರು ಸಂಪಾದಿಸಿ ಮುಂಬೈ ವಿವಿ ಕನ್ನಡ ವಿಭಾಗದ ಮೂಲಕ ಪ್ರಕಟಿಸಿದ 'ಭಾಷೆಗಳ ಗಡಿ ಗೆದ್ದ ಭಾರತೀಯ' ಗೌರವ ಗ್ರಂಥವನ್ನು ಡಾ. ಭೈರಪ್ಪನವರಿಗೆ ಸಮರ್ಪಿಸಲಾಯಿತು. ಡಾ. ಜಿ. ಎನ್. ಉಪಾಧ್ಯ ವಿರಚಿತ 'ಮುಂಬಯಿ ಕನ್ನಡ ಪರಿಸರ' ಗ್ರಂಥವನ್ನು ಶ್ರೀಯುತ ಅಶೋಕ ಸುವರ್ಣ ಅವರು ಬಿಡುಗಡೆಗೊಳಿಸಿದರು. ಡಾ. ಉಮಾ ರಾಮ ರಾವ್ ಬರೆದ ಕೃತಿ 'ಸಂಶೋಧನೆಯಲ್ಲಿ ಶಿಸ್ತು ಮತ್ತು ನೈತಿಕ ಪ್ರಜ್ಞೆ' ಹಾಗೂ ಕಲಾ ಭಾಗ್ವತ್ ಅವರ 'ಕನ್ನಡ ಸಂಶೋಧನೆಗೆ ಮುಂಬಯಿ ಕೊಡುಗೆ' ಕೃತಿಗಳನ್ನು ಶ್ರೀಯುತ ಎಸ್. ಎಲ್. ಭೈರಪ್ಪ ಅವರು ಲೋಕಾರ್ಪಣೆ ಗೊಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಮುಂಬೈ ವಿಶ್ವವಿದ್ಯಾನಿಲಯ, ಕನ್ನಡ ವಿಭಾಗದ ಪ್ರಾಧ್ಯಾಪಕರು, ಮುಖ್ಯಸ್ಥರು ಆದ ಡಾ. ಜಿ. ಎನ್. ಉಪಾಧ್ಯ ಅವರು ಅತಿಥಿಗಳನ್ನು ಸ್ವಾಗತಿಸುತ್ತಾ, ಹಿಮಾಲಯ ಸದೃಶ ವ್ಯಕ್ತಿತ್ವ ಹೊಂದಿರುವ ಭೈರಪ್ಪನವರು ಓದುಗರನ್ನು ಚುಂಬಕ ಶಕ್ತಿಯಂತೆ ಸೆಳೆಯುವ ಕಾದಂಬರಿಕಾರರು. ತಮ್ಮ ಮಾತು-ಕೃತಿಗಳ ಮೂಲಕ ದೇಶ ವಿದೇಶಗಳಲ್ಲಿ ಹೆಸರು ಮಾಡಿದವರು. ನಮ್ಮ ಸಾಂಸ್ಕೃತಿಕ ಹಿರಿಮೆ ಗರಿಮೆಯನ್ನು ಜಗದಗಲ ಪಸರಿಸಿದ ಸಾಹಿತಿ ಭೈರಪ್ಪನವರು. ವಿದ್ವಾಂಸರೆಂದರೆ, ಸಾಹಿತಿಗಳೆಂದರೆ ಹೀಗಿರುತ್ತಾರೆ ಎಂಬುದಕ್ಕೆ ಮಾದರಿಯಾದ ಅವರು ದೊಡ್ಡ ಓದುಗ ವರ್ಗವನ್ನು ಬೆಳೆಸಿದ, ತಾರಾ ಮೆರುಗನ್ನು ಹೊಂದಿರುವ ಶ್ರೇಷ್ಠ ಲೇಖಕರು ಎಂದು ಅಭಿಪ್ರಾಯ ಪಟ್ಟರು.

ಸಾಹಿತಿ, ವಿಮರ್ಶಕರಾದ ಡಾ. ಸುಪ್ರಿಯಾ ಸಹಸ್ರಬುದ್ಧೆ ಅವರು 'ವಿಶ್ವಮಾನ್ಯ ಲೇಖಕರಾಗಿ ಭೈರಪ್ಪ' ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು. ಡಾ. ಭೈರಪ್ಪ ಅವರ ಕಾದಂಬರಿಗಳ ಕುರಿತು ಮಾತನಾಡಿದ ಅವರು 'ದೈತ್ಯ ಪ್ರತಿಭೆ' ಎಂಬ ಪದ ಭೈರಪ್ಪನವರಿಗೆ ಸರಿಯಾಗಿ ಒಪ್ಪುತ್ತದೆ. ಅವರು ಬರಿಯ ಕನ್ನಡದ ಸಾಹಿತಿಯಲ್ಲ. ಅವರು ವಿಶ್ವಸಾಹಿತಿ ಎಂಬ ಉಪಾಧಿಗೆ ಪಾತ್ರರಾದವರು. ಪ್ರತಿಯೊಬ್ಬ ಸಾಹಿತಿಯೂ ತಾನು ಬರೆಯುವಾಗ ಒಂದು ವೃತ್ತವನ್ನು ನಿರ್ಮಿಸಿಕೊಂಡು ಅದರೊಳಗೆ ಬರೆಯುತ್ತಿರುತ್ತಾನೆ. ಆದರೆ ಭೈರಪ್ಪನವರು ಆ ವೃತ್ತವನ್ನು ದಾಟಿ ವಿಶ್ವಮಾನ್ಯರಾಗಿ ಜನರನ್ನು ತಲುಪಿದವರು. ಅವರು ಕೇವಲ ಕನ್ನಡದ ಸಾಹಿತಿಯಲ್ಲ, ಅವರು ನಮ್ಮೆಲ್ಲರ ಸಾಹಿತಿ. ನೋಬೆಲ್ ಪ್ರಶಸ್ತಿ ಪಡೆಯಲು ಯೋಗ್ಯರಾದವರು ಎಂಬುದಾಗಿ ಭೈರಪ್ಪನವರ ಬರವಣಿಗೆ, ಚಿಂತನೆಗಳ ವಿಶೇಷತೆಯನ್ನು ಎತ್ತಿ ಹೇಳಿದರು.

ಸಂದರ್ಶಕ ಪ್ರಾಧ್ಯಾಪಕರಾದ ಡಾ. ಉಮಾ ರಾಮರಾವ್ ಅವರು ಕಾರ್ಯಕ್ರಮದ ವಿಶೇಷ ಉಪನ್ಯಾಸಕಾರರಾದ ಡಾ. ಸುಪ್ರಿಯಾ ಸಹಸ್ರಬುದ್ಧೆ ಅವರನ್ನು ಪರಿಚಯಿಸುತ್ತಾ, ಡಾ. ಸಹಸ್ರಬುದ್ಧೆ ಅವರ ವಿದ್ವತ್ತು ಮತ್ತು ಡಾ. ಭೈರಪ್ಪನವರ ಕೃತಿಗಳನ್ನು ಓದಿ ಅವರು ಮಾಡಿದ ಪ್ರೌಢ ವಿಮರ್ಶೆಗಳು ಬೆರಗು ಮೂಡಿಸುವಂತಹುದು. ಸರಳ, ನಿಸ್ಪೃಹ ವ್ಯಕ್ತಿತ್ವದ ಅವರು ಭೈರಪ್ಪನವರ ಕಾದಂಬರಿಗೆ ಸರಿಸಾಟಿಯಾಗುವಂತಹ ಕಾದಂಬರಿಗಳು ಮರಾಠಿಯಲ್ಲಿಲ್ಲ ಎಂದು ಒಪ್ಪಿಕೊಳ್ಳುವ ಮುಕ್ತ ಮನಸ್ಸು, ಹೃದಯ ವೈಶಾಲ್ಯತೆ ಉಳ್ಳವರು ಎಂದರು. ಇದೇ ಸಂದರ್ಭದಲ್ಲಿ ವಿಭಾಗದ ಸಂಶೋಧನ ವಿದ್ಯಾರ್ಥಿಗಳಾದ ಕಲಾಭಾಗ್ವತ್ ಹಾಗೂ ಅನಿತಾ ಪೂಜಾರಿ, ತಾಕೋಡೆ ಇವರಿಗೆ 'ಶೋಧ ಸಿರಿ' ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

## ಕೃತಿ ಬಿಡುಗಡೆ



ಕವಿ, ಕತೆಗಾರ್ತಿ, ಲೇಖಕಿ, ಹವ್ಯಕ ಸಂದೇಶದ ಸಂಪಾದಕಿ ಶ್ರೀಮತಿ ಅಮಿತಾ ಭಾಗವತ್ ಅವರ ಮೊದಲ ಕಾದಂಬರಿ 'ನೀಲಿ ನಕ್ಷೆ' ಯನ್ನು ಅಂಕಿತ ಪ್ರಕಾಶನ, ಬೆಂಗಳೂರು, ಹೊರ ತರಲಿದೆ. 'ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಡ್ ಕಲ್ಚರ್, ವಾಡಿಯಾ ರಸ್ತೆ, ಬಸವನ ಗುಡಿ, ಬೆಂಗಳೂರು' ಇಲ್ಲಿ, ಆಗಸ್ಟ್ 20, 2023 ರಂದು, ಬೆಳಿಗ್ಗೆ 10 ಗಂಟೆಗೆ ನಡೆಯುವ ಸಮಾರಂಭದಲ್ಲಿ, ಸಾಹಿತಿ ಜಯಂತ ಕಾಯ್ಕಿಣಿ ಕೃತಿಯನ್ನು ಅನಾವರಣ ಮಾಡಲಿದ್ದಾರೆ .


**ಎಲ್ಲರಿಗೂ ಆತ್ಮೀಯ ಸ್ವಾಗತ.**

'Havyaka Sandesha' August 2023

*RNI NO. MAHBIL / 2000 / 746,*
*Postal Registration No. MCN/161/2021-2023*
*WPP License No. MR / Tech / WPP-130 / North / 2021-2023*
*'Licence to post without prepayment'*

| | | |
|---|---|---|
| ***Posted at Mumbai Patrika Channel Stg. Office Mumbai - 400 001*** <br> **Date of Publication : 1st of every month** | **REGISTERED NEWSPAPER** | **Date of Posting :** <br> **2nd, 3rd of every month** |
| ***If undelivered, please return to :*** <br> **HAVYAKA WELFARE TRUST** <br> B-207, Valmiki Apts., Near Pharmacy College, <br> Sundar Nagar, Kalina, Vidyanagari P. O., <br> Mumbai - 400 098. ✆ 2665 2591 <br> **E-mail : havyakamumbai@hotmail.com** <br> **Visit : www.havyakamumbai.com** <br><br> Published by Narayan Akadas R. <br> for Havyaka Welfare Trust, Mumbai - 400 098. <br> being printed at M/s. Navin Printers, Mumbai - 400 016. <br> Hon. Editor : **Smt. Amita S. Bhagwat** | **To,** | |


ಡಾ. ಭೈರಪ್ಪ ಅವರ ಕೃತಿಗಳ ಆಯ್ದ ಭಾಗಗಳನ್ನು ಕಂಠದಾನ ಕಲಾವಿದರಾದ ಸುರೇಂದ್ರ ಕುಮಾರ್ ಮಾರ್ನಾಡ್ ಮತ್ತು ಸಂಶೋಧನ ವಿದ್ಯಾರ್ಥಿ ನಳಿನಾ ಪ್ರಸಾದ್ ಅವರು ವಾಚಿಸಿದರು. ಸಹಪ್ರಾಧ್ಯಾಪಕರಾದ ಡಾ. ಪೂರ್ಣಿಮಾ ಸುಧಾಕರ ಶೆಟ್ಟಿ ಅವರು ಕಾರ್ಯಕ್ರಮ ವನ್ನು ಸಂಯೋಜಿಸಿ, ನಿರೂಪಿಸಿದರು. ಮುಂಬೈಯ ಅನೇಕ ಗಣ್ಯರು ಮತ್ತು ವಿಭಾಗದ ವಿದ್ಯಾರ್ಥಿಗಳು ಹಾಜರಿದ್ದರು. ವಿದ್ಯಾ ರಾಮಕೃಷ್ಣ ಅವರು ತಾಂತ್ರಿಕ ಸಹಕಾರ ನೀಡಿದರು.




## Book on Financial Management

5,000 copies of the book 'The Financial Independence Marathon' written by Vinod Bhat, launched by Penguin India in Jan 2023, have already been sold. Like a simple and entertaining guide, the book explains basic concepts of financial planning, asset allocation, and various options like stocks, Mutual Funds, Bitcoin, startups, etc which can help in taking better investment decisions.

***We Congratulate Shri Vinod Bhat***

